ಮಕ್ಕಳ ಕಸ್ತೂರ್‌ಬಾ

ಪ್ರೊ. ಲೀಲಾ ವಾಸುದೇವ್



ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಬೆಂಗಳೂರು

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ

ಮಕ್ಕಳ ಕಸ್ತೂರ್‌ಬಾ

ಪ್ರೊ. ಲೀಲಾ ವಾಸುದೇವ್

ಪ್ರಕಾಶಕರು

ಕರ್ನಾಟಕ ಗಾಂಧಿ ಸ್ಮಾರಕ ನಿಧಿ


ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560001, ದೂರವಾಣಿ : 080–22261967

ಇಮೇಲ್ : gandhibhavanabengaluru@gmail.com

ಮಕ್ಕಳ ಕಸ್ತೂರ್‌ಬಾ
ಲೇಖಕರು : ಪ್ರೊ. ಲೀಲಾ ವಾಸುದೇವ್
ಪ್ರಕಾಶಕರು : ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

ಮೊದಲ ಮುದ್ರಣ	:	2016
ಪರಿಷ್ಕೃತ ದ್ವಿತೀಯ ಮುದ್ರಣ	:	2022
ಪ್ರತಿಗಳು	:	1000
ಪುಟಗಳು	:	XVI + 48
ಬೆಲೆ	:	ರೂ. 55/–
ಒಳ ಪುಟ ಕಾಗದ	:	58 ಜಿ.ಎಸ್.ಎಂ. ಮ್ಯಾಪ್‌ಲಿತೋ
ಮುಖ ಪುಟ	:	300 ಜಿ.ಎಸ್.ಎಂ. ಆರ್ಟ್ ಕಾರ್ಡ್
ISBN No	:	978-81-950785-0-9
ಸಹಕಾರ	:	ರಾಷ್ಟ್ರೀಯ ಸೇವಾ ಯೋಜನೆ
ಮುದ್ರಕರು	:	ಕ್ರಿಯೇಟಿವ್‌ಗೀಕ್ಸ್ ಯಾದವ ಕಾಲೇಜು ರಸ್ತೆ ಮಾಧವನಗರ, ಬೆಂಗಳೂರು–560001 ದೂರವಾಣಿ : 080 40927049




ಅರ್ಪಣೆ

ಗಾಂಧಿ ಭವನದ ಅಧ್ಯಕ್ಷರು, ಪಿತೃ ಸಮಾನರಾದ

ಡಾ. ಹೊ. ಶ್ರೀನಿವಾಸಯ್ಯ ಅವರಿಗೆ

ಗೌರವಪೂರ್ವಕವಾಗಿ



ಶಿಸ್ತಿಗೆ ಮೇಲು ಕೀಳೆಂಬುದಿಲ್ಲ. ಅದರ ಬೆಲೆಯನ್ನು ಅರಿತ ರಾಜನು ಏಕಮಾತ್ರ ನ್ಯಾಯಾಧೀಶನೆಂದು ನೇಮಿಸಿದ ತನ್ನ ಪ್ರಜೆಗೂ ತಲೆಬಾಗುವನು.

–ಮಹಾತ್ಮ ಗಾಂಧಿ

ನಿಮ್ಮೊಡನೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಸ್ವಾತಂತ್ರ್ಯೋತ್ಸವ 75ರ ವರ್ಷಾಚರಣೆ ಸಂದರ್ಭದಲ್ಲಿ ಮಕ್ಕಳ ಕಸ್ತೂರ್‌ಬಾ ಕೃತಿಯನ್ನು ಪ್ರಕಟಿಸಲು ಹೆಮ್ಮೆ ಎನಿಸುತ್ತದೆ. ಪ್ರೊ. ಲೀಲಾ ವಾಸುದೇವ್ ಅವರು ಮೂಲತಃ ಬರಹಗಾರರು ಹಾಗೂ ನಿರಂತರ ಓದುಗರು, ಸುಮಾರು 33 ವರ್ಷಗಳು ವಿದ್ಯಾರ್ಥಿ – ವಿದ್ಯಾರ್ಥಿನಿಯರೊಂದಿಗೆ ಪಾಠ ಮಾಡುತ್ತ ಕಲಿಸಿದ್ದಕ್ಕಿಂತ, ಕಲಿತಿದ್ದೇ ಹೆಚ್ಚು ಎನ್ನುತ್ತಿರುತ್ತಾರೆ. ಇವರು ಗಾಂಧೀಜಿ ಮತ್ತು ಕಸ್ತೂರ್‌ಬಾ ಜೀವನ, ಆದರ್ಶ ಮತ್ತು ತತ್ವ ಸಿದ್ಧಾಂತಗಳಲ್ಲಿ ಕೆಲವನ್ನಾದರೂ ಪಾಲಿಸಲು ಸಾಧ್ಯವೇ ಎಂದು ಸದಾ ಪ್ರಯತ್ನಿಸುತ್ತಿರುತ್ತಾರೆ. ಸರಳತೆ, ಪರರಿಗೆ ನೋವುಂಟು ಮಾಡದ ಜೀವನ ವಿಧಾನ, ನಿರಂಹಕಾರ ಮತ್ತು ಶಿಸ್ತು ಇವರು ಅಳವಡಿಸಿಕೊಂಡ ಬದುಕಿನ ಕ್ರಮವಾಗಿದೆ. ಅದರಂತೆ ಅವರು ಗಾಂಧೀಜಿ ಮತ್ತು ಕಸ್ತೂರ್‌ಬಾ ಅವರನ್ನು ಓದಿಕೊಂಡಂತೆ, "ಮಹಾತ್ಮನೊಂದಿಗಿನ ಸಹಚರ್ಯದಲ್ಲಿ 'ಬಾ' ಅವರ ಪಾತ್ರ" ಕುರಿತಾಗಿ ಬರೆಯಲೇ ಬೇಕೆಂಬ ಒತ್ತಾಸೆಯಿಂದ ಈ ಕೃತಿ ಮೂಡಿ ಬಂದಿದೆ.

ಇವರು 'ಅಂಶುಮಾಲಿ' ಎಂಬ ಅಂಕಿತನಾಮದಿಂದ ಕವನಗಳನ್ನು ರಚಿಸಿದ್ದಾರೆ. ಇವರ ಭಾವನ ಬಿಂದು ಕವನ

ಸಂಕಲನ, "ಧರ್ಮಜ್ಯೋತಿ" ಕೃತಿಗಳು ಪ್ರಕಟಗೊಂಡಿವೆ. ಗಾಂಧಿ ಸಾಹಿತ್ಯ, ಕನ್ನಡ ಸಾಹಿತ್ಯದಲ್ಲಿನ ಆಸಕ್ತಿ ಮತ್ತು ಗಾಂಧೀಜಿ ಅವರ ಅನುಯಾಯಿಯಾಗಿರುವುದರಿಂದಲೇ ಇವರು, ಗಾಂಧಿ ಸಾಹಿತ್ಯ ಸಂಘ, ಸಿದ್ಧವನಹಳ್ಳಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್, ಚುಟುಕು ಸಾಹಿತ್ಯ ಸಂಘದ ಸದಸ್ಯರಾಗಿ, ಜೊತೆಗೆ ಮಲ್ಲೇಶ್ವರಂನ ಸಾಮಾಜಿಕ, ಶೈಕ್ಷಣಿಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಾ ಜನಾನುರಾಗಿಯಾಗಿದ್ದಾರೆ.

ಇಂಥಹ ಆದರ್ಶ ಮಹಿಳೆಯಾದ ಪ್ರೊ. ಲೀಲಾ ವಾಸುದೇವ್ ಅವರು, ಭಾರತಕ್ಕೆ ಆದರ್ಶ ಮಾತೆಯಾದ ಕಸ್ತೂರ್‌ಬಾ ಅವರ ಕೃತಿ ಬರೆದು ಗಾಂಧಿ ಭವನದಿಂದ ಪ್ರಕಟಗೊಳ್ಳಬೇಕೆಂಬ ಮಹತ್ವಾಕಾಂಕ್ಷೆಯಿಂದ ನಮಗೆ ಕೊಟ್ಟಿದ್ದಾರೆ. ಕಸ್ತೂರ್‌ಬಾ ಅವರ ಆದರ್ಶ ಜೀವನ, ಮಕ್ಕಳು ಮನ ತಟ್ಟಲಿ ಎಂದು ಮಕ್ಕಳಿಗಾಗಿ ಬರೆದಿದ್ದಾರೆ. ಮಕ್ಕಳು ಓದಲಿ, ಅರಿಯಲಿ ಎಂದು ನಾನೂ ಆಶಿಸುತ್ತೇನೆ. ಆದ್ದರಿಂದ ಪ್ರೊ. ಲೀಲಾ ವಾಸುದೇವ್ ಅವರಿಗೆ ನಾನು ಅಭಿನಂದನೆಗಳನ್ನು ತಿಳಿಸುತ್ತೇನೆ. ಈ ಕೃತಿಗೆ ಮುನ್ನುಡಿ ರೂಪದಲ್ಲಿ 'ಎರಡು ಮಾತು' ಬರೆದ ಗಾಂಧಿ ಭವನದ ಉಪಾಧ್ಯಕ್ಷರು, ಕಸ್ತೂರ್‌ಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಅರಸೀಕೆರೆಯ ಟ್ರಸ್ಟಿಗಳು ಆಗಿರುವ ಪ್ರೊ. ಜಿ.ಬಿ. ಶಿವರಾಜು ಇವರಿಗೆ ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಅಚ್ಚುಕಟ್ಟಾಗಿ ಸಿದ್ಧಗೊಳಿಸಿದ ಗಾಂಧಿ ಭವನದ ಗೌ. ಕಾರ್ಯದರ್ಶಿ, ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ. ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ನಾಡೋಜ ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆ ಮಾಲಿಕೆ ಮತ್ತು ಇದೀಗ ಸ್ವಾತಂತ್ರ್ಯೋತ್ಸವ – 75ರ ವರ್ಷಾಚರಣೆಯ ಸಂದರ್ಭದಲ್ಲಿ ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವಾಗುತ್ತಿದೆ. ಪ್ರೊ. ಲೀಲಾ ವಾಸುದೇವ್ ಅವರು ಬರೆದಿರುವ "ಮಕ್ಕಳ ಕಸ್ತೂರ್‌ಬಾ" ಕೃತಿ ವಿದ್ಯಾರ್ಥಿ – ವಿದ್ಯಾರ್ಥಿನಿಯರಿಗೆ ಸರಳ ಓದಿಗೆ ತಕ್ಕುದಾದ ಪುಸ್ತಕವಾಗಿದೆ. ಸುದೀರ್ಘವಾಗಿ ಅಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಕಾಲೇಜಿನಲ್ಲಿ ಮಕ್ಕಳೊಂದಿಗೆ ಬದುಕನ್ನು ಹಂಚಿಕೊಂಡ, ಲೀಲಾ ಅವರು ಮಕ್ಕಳಿಗಾಗಿಯೇ ಈ ಪುಸ್ತಕವನ್ನು ಬರೆಯಲು ಇಚ್ಛಿಸಿದ್ದೂ ಕೂಡ, ನಿರಂತರವಾಗಿ ಮಕ್ಕಳೊಂದಿಗಿರುವ ಆಸಕ್ತಿ ಹೊಂದಿರುವುದರ ದ್ಯೋತಕವಾಗಿದೆ. ಭವಿಷ್ಯದಲ್ಲಿ ಮಕ್ಕಳು ಪ್ರಜ್ಞಾವಂತರಾಗಿ ಬಾಳಲಿ ಎಂಬುದಕ್ಕಾಗಿ ದೇಶಕ್ಕಾಗಿ ದುಡಿದ ಗಣ್ಯರ ಜೀವನವಿಚಾರಗಳನ್ನು ಅವರಿಗೆ ತಿಳಿಸುವ ಪ್ರಯತ್ನ ಮಾಡಿದ ಪ್ರೊ. ಲೀಲಾ ಅವರ ಕಾಳಜಿಗೆ ಅಭಿನಂಧನೆಗಳನ್ನು ತಿಳಿಸುತ್ತೇನೆ.

ಗಾಂಧೀಜಿ ಅವರ ಜೀವನ ಚರಿತ್ರೆ, ಎಲ್ಲಾ ಭಾಷೆಗಳಲ್ಲಿ ಅಪಾರವಾಗಿ ದೊರಕುತ್ತದೆ. ಆದರೆ ಜೀವನ ಸಂಗಾತಿಯಾಗಿ 56 ವರ್ಷಗಳ ಕಾಲ ಜೀವ ತೇದ 'ಬಾ' ಅವರ ಬಗ್ಗೆ ಕೃತಿಗಳು ಕಡಿಮೆ ಇವೆ. ಅದರಲ್ಲೂ ಮಕ್ಕಳಿಗಾಗಿ, ಕೃತಿಗಳು ತೀರಾ ಕಡಿಮೆ. ಆ ಕೊರತೆಯನ್ನು ನೀಗಿಸಲೆಂಬಂತೆ ಪ್ರೊ. ಲೀಲಾ ಅವರ ಈ ಪುಸ್ತಕ ಹೊರಬಂದಿದೆ. ಸರಳ ಸುಂದರ, ಕನ್ನಡ ಭಾಷೆಯಲ್ಲಿ ಮಕ್ಕಳಿಗಾಗಿ ಕೃತಿ ರಚಿಸಲು ಮಕ್ಕಳ ಮನಸ್ಸನ್ನು ಅರಿತವರಿಂದ ಮಾತ್ರ ಸಾಧ್ಯವಾಗುತ್ತದೆ. ಅಂಥಹ ಕಾರ್ಯ ಶ್ರೀಮತಿ ಲೀಲಾ ಅವರಿಂದ ಸಾಧ್ಯವೆಂದು ಮನಗಂಡು ಗಾಂಧಿ ಭವನದ ಅಂದಿನ ಅಧ್ಯಕ್ಷರಾಗಿದ್ದ ಡಾ. ಹೊ. ಶ್ರೀನಿವಾಸಯ್ಯ


ಅವರೂ ಮತ್ತು ಸುಮಂಗಲಿ ಸೇವಾಶ್ರಮದ ಶ್ರೀಮತಿ ಸುಶೀಲಮ್ಮ ಅವರ ಪ್ರೋತ್ಸಾಹ ಇವರಿಗೆ ಉತ್ತೇಜನ ನೀಡಿದ್ದನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಕಸ್ತೂರ್‌ಬಾ ಅವರ ಕೆಲಸ ಕಾರ್ಯಗಳು, ಹೊಣೆಗಾರಿಕೆಗಳು, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವ ಆಸಕ್ತಿ, ಆಶ್ರಮದ ಜವಾಬ್ದಾರಿ, ದೇಶ ವಿದೇಶಗಳ ವಾಸ, ಖಾದಿ ಉಡುಪು ಧಾರಣೆ, ನೂಲುನೇಯ್ಗೆ ಕೈಂಕರ್ಯ, ಪತ್ರಿಕೆಯಲ್ಲಿ ಕೆಲಸ, ಸೆರೆಮನೆವಾಸದ ಕಷ್ಟಕಾರ್ಪಣ್ಯದ ಬದುಕನ್ನು ಬದುಕಿದ ದಿಟ್ಟ ಮಹಿಳೆಯ ಸಾರ್ವಜನಿಕ ಜೀವನವನ್ನೂ ಈ ಕೃತಿ ಕಟ್ಟಿಕೊಡುತ್ತದೆ. ಹಾಗೆಯೇ ಗಂಧದಂತೆ, ಜೀವತೇದ ಜೀವಿ, ಆಗಾಖಾನ್ ಅರಮನೆಯೆಂಬ ಸೆರೆಮನೆಯಲ್ಲಿ ಜೀವನ ಸಂಗಾತಿಯ ಮಡಿಲಲ್ಲಿ ಅಂತಿಮ ಕ್ಷಣಗಳನ್ನು ಕಳೆದು ಅಲ್ಲೇ ಸಮಾಧಿಯಾದ ಅಪೂರ್ವ ಜೀವನ ಚರಿತ್ರೆ ಭಾರತದ ಇತಿಹಾಸದ ಸ್ಮರಣೀಯ ಭಾಗವಾಗಿದೆ.

ಇಂಥಹ ಕೃತಿಯನ್ನು ಬರೆದು, ಗಾಂಧಿ ಭವನದಿಂದ ಪ್ರಕಟವಾಗಲಿ ಎಂದು ಆಶಿಸಿ, ನಮಗೆ 'ಕಸ್ತೂರ್‌ಬಾ' ಕೃತಿಯನ್ನು ಹೊರತರಲು ಸಹಕರಿಸಿದ ಲೇಖಕಿ, ಸಾಹಿತಿ, ಕವಯಿತ್ರಿ, ಕಲಾವಿದೆ ಪ್ರೊ ಲೀಲಾ ವಾಸುದೇವ್ ಅವರಿಗೆ ಅನಂತ ಧನ್ಯವಾದಗಳು. ಈ ಕೃತಿಗೆ ಮುನ್ನುಡಿಯನ್ನು ಬರೆದು ಕಸ್ತೂರ್‌ಬಾ ಅವರ ತ್ಯಾಗ ಜೀವನದ ಬಗ್ಗೆ ಹೇಳುತ್ತಾ "ಗಾಂಧಿ ಅವರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ "ಕಸ್ತೂರ್‌ಬಾ ಗಾಂಧಿ ಪ್ರಮುಖರು" ಎಂಬ ಮಾತನ್ನು ಹೇಳಿದ, ಪ್ರೊ ಶಿವರಾಜು, ಉಪಾಧ್ಯಕ್ಷರು, ಗಾಂಧಿ ಭವನ ಇವರಿಗೆ ಗೌರವ ನಮನಗಳು.

ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂತಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧೀ ಭವನದ ಅಧ್ಯಕ್ಷರಾಗಿರುವ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಹಾಗೂ ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ



"ಜೀವನವೆಂದರೆ ಆಕಾಂಕ್ಷೆ. ಚಿತ್ರ, ಸಿದ್ಧಿ, ಆತ್ಮಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ ಧ್ಯೇಯವಾಗಿದೆ. ನಮ್ಮ ಲೋಪದೋಷಗಳ ಮೂಲಕ ನಾವು ಆ ಉಚ್ಚ ಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ. ಅವುಗಳನ್ನು ಹೋಗಲಾಡಿಸಲು ನಾನು ಸತ್ಯದೇವತೆಯನ್ನು ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ".

- ಮಹಾತ್ಮ ಗಾಂಧಿ

ಎರಡು ಮಾತು

ಮಹಾತ್ಮಗಾಂಧೀ ಭಾರತಕ್ಕಷ್ಟೇ ಅಲ್ಲ, ಜಗತ್ತಿಗೆ ನಾಯಕ"

- ಬರಾಕ್ ಒಬಾಮ

"ಗಾಂಧೀ ಜಗತ್ತಿಗೆ ಅನಿವಾರ್ಯ, ಮರೆತರೆ ವಿಶ್ವದನಾಶ"

- ಲೂಥರ್ ಕಿಂಗ್

ಅಮೇರಿಕಾ ದೇಶದ ಈ ಇಬ್ಬರು ನಾಯಕರು ಗಾಂಧೀಜಿ ಬಗ್ಗೆ ನೀಡಿದ ಮೇಲಿನ ಹೇಳಿಕೆಗಳು ಗಾಂಧಿ ವ್ಯಕ್ತಿ ವಿಚಾರಗಳ ಪ್ರಸ್ತುತತೆ ಮತ್ತು ಅನಿವಾರ್ಯತೆಯನ್ನು ತಿಳಿಸುತ್ತವೆ. ಜರ್ಮನಿ ತತ್ವಜ್ಞಾನಿ ಮ್ಯಾಕ್ಸ್ ಮುಲ್ಲರ್ "ಜಗತ್ತಿನ ಎಲ್ಲ ಜಟಿಲ ಸಮಸ್ಯೆಗಳಿಗೆ ಭಾರತೀಯ ಮಾರ್ಗ ಅರ್ಥಾತ್ ಗಾಂಧಿ ಮಾರ್ಗ ಒಂದೇ ಪರಿಹಾರ" ಎಂಬ ಮಾತು ಅವರ ವ್ಯಕ್ತಿತ್ವದ ಅಗಾಧತೆಯನ್ನು ಸಾರುತ್ತದೆ. ಗಾಂಧಿ ವಿಚಾರಗಳು ಒಂದು ಕಾಲ ಅಥವಾ ಒಂದು ದೇಶಕ್ಕೆ ಸೀಮಿತವಾದವಲ್ಲ. ಅವುಗಳು ಮನುಕುಲ ಇರುವವರೆಗೂ ಪ್ರಸ್ತುತ ಎಂಬುದು ಸತ್ಯಸ್ಯಸತ್ಯ.

ಇಂತಹ ಗಣ್ಯರ ಮೇರು ವ್ಯಕ್ತಿತ್ವವು ದಿಢೀರನೆ ರೂಪಿತವಾದುದಲ್ಲ. ಹಲವು ಘಟನೆಗಳು, ಸನ್ನಿವೇಶಗಳು, ಜಗತ್ತಿನ ವಿಚಾರಗಳು ಹಾಗೂ ಶ್ರೇಷ್ಠ ವ್ಯಕ್ತಿಗಳ ಜೀವನಗಳಿಂದ ಪ್ರಭಾವಿತವಾಗಿ ರೂಪಿತವಾಗಿದೆ. ಗಾಂಧೀಜಿ ಅವರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ ಅವರ ಪತ್ನಿ ಕಸ್ತೂರ್‌ಬಾ ಗಾಂಧಿ ಪ್ರಮುಖರು ಎಂಬುದು ಸ್ವತಃ ಗಾಂಧೀಜಿಯವರೇ ಒಪ್ಪಿಕೊಂಡ ಸಂಗತಿಯಾಗಿದೆ. "ಪ್ರತಿಯೊಬ್ಬ ಮಹಾಪುರುಷನ ಹಿಂದೆ ಒಬ್ಬ ಸ್ತ್ರೀ ಇರುತ್ತಾಳೆ" ಎಂಬ ಮಾತು ಕಸ್ತೂರ್‌ಬಾ ಗಾಂಧಿ ಅವರಂತಹ ತ್ಯಾಗಿಗಳನ್ನು ಕುರಿತು ಹೇಳಿದ್ದಾಗಿದೆ ಎಂಬುದು ಅಕ್ಷರ ಸಹ ಸತ್ಯ.

ಮಹಾತ್ಮಗಾಂಧಿ ಅವರ ಬಗ್ಗೆ ವಿಪುಲ ಸಾಹಿತ್ಯ ಲಭ್ಯವಿದೆ. ಆದರೆ ಅವರನ್ನು ರೂಪಿಸಿದವರಲ್ಲಿ ಪ್ರಮುಖರಾದ ಕಸ್ತೂರ್‌ಬಾ ಗಾಂಧಿ ಅವರ ಬಗ್ಗೆ ಹೆಚ್ಚು ಸಾಹಿತ್ಯವಿಲ್ಲ. ಯುವಪೀಳಿಗೆಗೆ ಇಂದು ಈ ಮಹಾನ್ ತ್ಯಾಗಿಗಳ ಮಾಹಿತಿ ಅತ್ಯವಶ್ಯಕವಾಗಿದೆ. ಅವರ ಜೀವನ ಮತ್ತು ಸಾಧನೆಯ ಬಗ್ಗೆ ಸಂಕ್ಷೇಪ ಮಾಹಿತಿಯನ್ನು "ಮಕ್ಕಳ ಕಸ್ತೂರ್‌ಬಾ" ಎಂಬ ಈ ಕಿರು ಪುಸ್ತಕದಲ್ಲಿ ನೀಡಿ ಶ್ರೀಮತಿ ಲೀಲಾ ವಾಸುದೇವ್ ಅವರು ಮಹದುಪಕಾರ ಮಾಡಿದ್ದಾರೆ. ಶಿಕ್ಷಣ, ಸಾಹಿತ್ಯ, ಕಲೆ, ಸಂಸ್ಕೃತಿ ಸೇವೆ ಮೊದಲಾದ ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಮೂಡಿಸಿ ನಿವೃತ್ತಿಯ ನಂತರವೂ ಶ್ರಮಿಸುತ್ತಿರುವ ಶ್ರೀಮತಿ ಲೀಲಾ ವಾಸುದೇವ್ ಅವರ ಈ ಕೃತಿ ಗಾಂಧಿ ಸಾಹಿತ್ಯಕ್ಕೆ ಒಂದು ಮೌಲ್ಯಯುತ ಸೇರ್ಪಡೆ. ಈ ಕೃತಿಯಲ್ಲಿ ಕಸ್ತೂರ್‌ಬಾ ಗಾಂಧಿ ಅವರ ಬಗ್ಗೆ ಮಕ್ಕಳು ತಿಳಿಯಲೇಬೇಕೆಂಬ ಆಸಕ್ತಿ ಮೂಡಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಶ್ರೀಮತಿ ಲೀಲಾ ವಾಸುದೇವ್ ಅವರು ಗಾಂಧೀಜಿ ಬಗ್ಗೆ ಮಾಡಿರುವ ಅಧ್ಯಯನ, ಅದೇ ಮಾರ್ಗದಲ್ಲಿ ಬದುಕುತ್ತಿರುವ ರೀತಿ, ಅಷ್ಟೇ ಏಕೆ ಇತರರನ್ನೂ ಈ ದಾರಿಯಲ್ಲಿ ಕರೆದೊಯ್ಯಬೇಕೆಂಬ ಹಂಬಲ ಅನನ್ಯವಾದುದು. ಶ್ರೀಮತಿ ಲೀಲಾವಾಸುದೇವ್ ಅವರ ಸಾಮಾಜಿಕ ಕಾಳಜಿ ನಿಜಕ್ಕೂ ಶ್ಲಾಘನೀಯ. ಅವರ ಸಾಹಿತ್ಯ ಕೃಷಿ ಇನ್ನೂ ಹೆಚ್ಚಲಿ ಸುಸಂಸ್ಕೃತ ಸಮಾಜ ನಿರ್ಮಾಣದಲ್ಲಿ ಅವರ ಹೆಸರು ಪ್ರಖ್ಯಾತಿಯಾಗಲಿ ಎಂದು ಪ್ರಾರ್ಥಿಸೋಣ.

ಪ್ರೊ. ಜಿ.ಬಿ. ಶಿವರಾಜು

ಹಾರೈಕೆ

ಗಾಂಧಿ ಶಾಂತಿ ಪ್ರತಿಷ್ಠಾನ, ಬೆಂಗಳೂರು ಅವರು ತಮ್ಮದೇ ಆದ ಚಟುವಟಿಕೆಗಳನ್ನು ನಡೆಸುವುದಲ್ಲದೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಸಹಯೋಗದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ.

ಗಾಂಧಿ ಶಾಂತಿ ಪ್ರತಿಷ್ಠಾನದ ಒಂದು ಅಂಗವಾದ ಮಹಿಳಾ ವಿಭಾಗಕ್ಕೆ ಶ್ರೀಮತಿ ಸುಶೀಲಮ್ಮ ಅವರು ಮುಖ್ಯಸ್ಥರು (ಸುಮಂಗಲಿ ಸೇವಾಶ್ರಮದ ಮುಖ್ಯಸ್ಥರು) ಒಮ್ಮೆ ಮಹಿಳೆಯರ ಸಭೆ ನಡೆಯುತ್ತಿರುವ ಸಂದರ್ಭದಲ್ಲಿ ಒಬ್ಬೊಬ್ಬ ಸದಸ್ಯರಿಗೊಂದೊಂದು ಕೆಲಸ ಹಚ್ಚುತ್ತಿದ್ದರು. ಹಾಗೆಯೇ, ಗಾಂಧೀ ವಿಚಾರಧಾರೆ ಬೇಕಾದಷ್ಟು ಪುಸ್ತಕಗಳಲ್ಲಿ ಪಡೆಯಬಹುದು. ಆದರೆ ಕಸ್ತೂರ್‌ಬಾ ಅವರ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಆದ್ದರಿಂದ ಮಕ್ಕಳಿಗೆ ಕಸ್ತೂರ್‌ಬಾ ವಿಷಯ ತಿಳಿಸುವ ಪ್ರಯತ್ನ ಮಾಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಹೊರಾಂಗಣದ ಕೆಲಸವನ್ನು ಮಾಡಲಾಗದ ನಾನು ಅವರ ಅಪೇಕ್ಷೆಯ ಮೇರೆಗೆ 'ಮಕ್ಕಳ ಕಸ್ತೂರ್‌ಬಾ' ವಿಚಾರವಾಗಿ ಬರೆಯುವುದಾಗಿ ಒಪ್ಪಿಕೊಂಡೆನು. ಅದರ ಪ್ರಯುಕ್ತ ಇಂದು 'ಮಕ್ಕಳ ಕಸ್ತೂರ್‌ಬಾ' ಎಂಬ ಕಿರುಹೊತ್ತಿಗೆ ಹೊರಬರುತ್ತಿದೆ. ನನಗೆ ಇಂತಹ ಅವಕಾಶ ಮಾಡಿಕೊಟ್ಟ ಶ್ರೀಮತಿ ಸುಶೀಲಮ್ಮನವರಿಗೆ ಗೌರವ ಪೂರ್ಣ ಅಭಿನಂದನೆಗಳು.

ಪುಟ್ಟ ಕೃತಿಯನ್ನು ಪರಿಷ್ಕರಿಸಿ, ಇನ್ನಷ್ಟು ಅಂದಗೊಳಿಸಿ, ಮಾಹಿತಿ ಪೂರ್ಣವಾಗಿ ಮಾಡಿ, ಸ್ವಾತಂತ್ರ್ಯೋತ್ಸವ 75ರ ಅಮೃತ ಮಹೋತ್ಸವ ಸಂದರ್ಭದಲ್ಲಿ ಬಿಡುಗಡೆಯಾಗುವಂತೆ ಮಾಡಿದ ನನ್ನ ನೆಚ್ಚಿನ ಗಾಂಧಿ ಭವನದ ಗೌ.ಕಾರ್ಯದರ್ಶಿ,

ಇಂದಿರಾ ಕೃಷ್ಣಪ್ಪ ಅವರಿಗೆ ನನ್ನ ಹೃದಯಾಂತರಾಳದ ಧನ್ಯವಾದಗಳು.

ಮೂವತ್ತು ವರುಷಗಳಿಂದ ನನ್ನ ತಂದೆಯ ಸ್ಥಾನದಲ್ಲಿದ್ದು ಉತ್ತೇಜನಕೊಟ್ಟು ಧೈರ್ಯ ಹೇಳಿ ನನ್ನನ್ನು ಪ್ರೋತ್ಸಾಹಿಸುತ್ತಿದ್ದ ಡಾ॥ ಹೊ. ಶ್ರೀನಿವಾಸಯ್ಯನವರಿಗೆ ನಾನು ಚಿರಋಣಿ. ಸಣ್ಣ ಪುಸ್ತಕವನ್ನು ಆಸಕ್ತಿಯಿಂದ ಅಚ್ಚುಕಟ್ಟಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್ ಅವರ ತಂಡಕ್ಕೆ ಅನಂತ ಧನ್ಯವಾದಗಳು,

ಪ್ರೊ. ಲೀಲಾ ವಾಸುದೇವ್

(ಲೇಖಕರು)

ಪರಿವಿಡಿ

ಭಾರತದ ಕುಲನಾರಿ ಕಸ್ತೂರ್‌ಬಾ

- ಅಂಶುಮಾಲಿ
(ಪ್ರೊ. ಲೀಲಾ ವಾಸುದೇವ್)

ಕಸ್ತೂರ್‌ಬಾ ಅವರ ಅಕ್ಕರೆಯ ನೆನಪು
ಕಸ್ತೂರಿ ಪರಿಮಳದಂತೆ ಕಂಪು
ಸರಳ ಜೀವನವನಪ್ಪಿ, ಸ್ವಹಿತವ ತ್ಯಜಿಸಿ
ದೇಶಕ್ಕಾಗಿ ಮಡಿದ ಮಮತಾಮಯಿ

ಅರಿವು ಮೂಡುವ ಮೊದಲೆ
ಬಂತು ಗೃಹಿಣಿಯ ಪಟ್ಟ
ಮಡಿಲಲಿ ತುಂಬಿತು
ಪುತ್ರರ ವ್ಯಾಮೋಹದ ಕೂಟ

ತಾಯ್ನಾಡ ಬಿಟ್ಟು ಪರನೆಲವ ಮೆಟ್ಟು
ಮದುರ ಮೈತ್ರಿಯ ಕಟ್ಟಿ
ಮರಳಿ ಗೂಡಿಗೆ ಬಂದ ಕುಲನಾರಿ

ಸಬರಮತಿ ಆಶ್ರಮಕೆ ಕಟ್ಟುನಿಟ್ಟಿನ ಕೋಟೆ ಕಟ್ಟಿ
ಆಶ್ರಮ ವಾಸಿಗೆ ಆದಿರಿ
ತತ್ತ್ವ ನಿಷ್ಠೆಯ ಮಾರ್ಗದರ್ಶಿ

ಸ್ವಾತಂತ್ರ್ಯ ಸಂಗ್ರಾಮದಿ ಶ್ರಮವಹಿಸಿ ಸೆಣಸಾಡಿ
ಬದುಕ ಸುಧೀರ್ಘ ಪಯಣದಿ
ಯಶಸ್ವಿಯಾದ ಭಾರತ ರಮಣಿ

ತ್ಯಾಗಜೀವಿಯ ಸತಿಯಾಗಿ
ನೋವಲ್ಲಿ ನಲಿವ ಕಂಡು
ದಿಟ್ಟ ಹೆಜ್ಜೆಯ ಗುರುತಲಿ
ಅರಳಿಸಿದಿರಿ ಸ್ತ್ರೀಯ ಪ್ರತಿಭೆ

ಸದ್ಗೃಹಿಣಿ ಸನ್ಮಾತೆ ಬಾಪುವಿನ ಸ್ಫೂರ್ತಿದಾತೆ
ಸರಿದಿರಿ ನೇಪಥ್ಯಕೆ ಸೆರೆಮನೆಯ ವಾಸದಲೆ

ಮಕ್ಕಳ ಕಸ್ತೂರ್‌ಬಾ

ಬಾಲ್ಯ

ಕಸ್ತೂರ್‌ಬಾ ಅವರು 1869ರ ಏಪ್ರಿಲ್ 11ರಂದು ಕಾಥೇವಾಡದ ಪೋರ್ ಬಂದರಿನಲ್ಲಿ ಜನಿಸಿದರು. ಇವರು ಹೆಸರಾಂತ ವರ್ತಕ ಶ್ರೀ ಗೋಕುಲ್ ದಾಸ್ ಮಾಕಂಜಿ ಮತ್ತು ಶ್ರೀಮತಿ ಬ್ರಜಕುಮಾರಿ ಬಾಯಿ ಅವರ ಏಕೈಕ ಪುತ್ರಿಯಾಗಿದ್ದರು.

ಶ್ರೀಮತಿ ಬ್ರಜಕುಮಾರಿ ಬಾಯಿ ಹೆಣ್ಣು ಮಗುವಿಗೆ ಜನ್ಮವಿತ್ತರೆಂಬ ಸುದ್ದಿ ಕೇಳಿದೊಡನೆಯೇ ಗೋಕುಲದಾಸ್ ಅವರು ಪತ್ನಿ ಮತ್ತು ಮಗು ನೋಡಲು ಬಂದರು. ಮಗಳನ್ನು ನೋಡಿದಾಕ್ಷಣ ಅವರು ಮೃದು ಸ್ವರದಲ್ಲಿ "ಕಸ್ತೂರಿ", "ಕಸ್ತೂರ್‌ಬಾ" ಎಂದು ಉಚ್ಚರಿಸಿದರು. ಅಂದೇ ಮಗುವಿನ ಹೆಸರನ್ನು ನಿರ್ಧರಿಸಿದರು. ಅಂತೆಯೇ ಆ ಮಗುವಿನ ಕೀರ್ತಿ ಆಕೆ ಬೆಳೆಯುತ್ತಿರುವಂತೆ ಕಸ್ತೂರಿ ಸುವಾಸನೆಯಂತೆ ಎಲ್ಲೆಡೆ ಪಸರಿಸಿತು.

ಕಸ್ತೂರ್‌ಬಾ ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದವರು. ಅವರ ತಾಯಿ ಪ್ರತಿನಿತ್ಯ ದೇವಾಲಯಕ್ಕೆ ಹೋಗಿ ಬರುತ್ತಿದ್ದರು. ಮತ್ತು ಮನೆಗೆ ಬಂದ ಮೇಲೆ ಪತಿಗೆ ಪ್ರಸಾದವನ್ನು ನೀಡುತ್ತಿದ್ದರು. ತಾಯಿಯೊಂದಿಗೆ ಬಾಲೆ ಕಸ್ತೂರ್‌ಬಾ ಸಹ ದೇವಾಲಯಕ್ಕೆ ಹೋಗಲು ಪ್ರಾರಂಭಿಸಿದರು.

ತಾಯಿ ಮತ್ತು ಮಗಳನ್ನು ಗಮನಿಸುತ್ತಲೇ ಇದ್ದ ಅರ್ಚಕರು "ನಿಮ್ಮ ಮಗಳು ದೈವದತ್ತವಾದ ಮಗು, ಮುಂದೆ ಇವಳ ಬಗ್ಗೆ

ಬಹಳ ಹೆಮ್ಮೆ ಪಡುವಂಥಹ ದಿನಗಳು ಬರುವುವು" ಎಂದು ಬಹಳ ಸಂತೋಷದಿಂದ ನುಡಿದರು. 'ಬಾ' ಕೂಡ ದೇವರನ್ನೇ ಜೀವನದ ಕೇಂದ್ರ ಬಿಂದುವಾಗಿ ಪರಿಗಣಿಸಿದ್ದರು. ಗೋ ಪೂಜೆ ಮಾಡುವುದರಲ್ಲಿ ಬಾ ಅವರಿಗೆ ಅತಿಶಯವಾದ ಆಸಕ್ತಿ. ಸಣ್ಣ ಪ್ರಾಯದಲ್ಲೇ ಮನೆಗೆಲಸ ಮಾಡಲು ಒಗ್ಗಿಸಿಕೊಂಡಿದ್ದರು. ತಾಯಿಯ ಕಷ್ಟ ಕಾರ್ಪಣ್ಯಗಳನ್ನು ನೋಡಿ ಮನಸ್ಸನ್ನು ಅಷ್ಟೇ ಗಟ್ಟಿ ಮಾಡಿಕೊಂಡರು. ಜೀವನದಲ್ಲಿ ಏನೇ ಬಂದರೂ ಅದಕ್ಕೆ ಹೊಂದಿಕೊಂಡು ಹೋಗಬೇಕೆಂಬ ಮನೋಭಾವವನ್ನು ಬೆಳಸಿಕೊಂಡರು. ಎಲ್ಲಾ ವಿಚಾರಗಳಲ್ಲೂ, ಮನೆಕೆಲಸಗಳಲ್ಲೂ, ಪೂಜೆ ಪುರಸ್ಕಾರಗಳಲ್ಲೂ, ಹಿರಿಯರಿಗೆ ಗೌರವದಲ್ಲೂ, ವ್ಯವಹಾರಿಕವಾಗಿಯೂ ನೈಪುಣ್ಯತೆ ಹೊಂದಿದ್ದರು. ಆದರೆ ಅವರಿಗೆ ಎಲ್ಲರಂತೆ ಶಿಕ್ಷಣವಾಗಿರಲಿಲ್ಲ. ಕಸ್ತೂರ್‌ಬಾ ಶಾಲೆಗೆ ಹೋಗಿ ಹೆಚ್ಚು ಕಲಿತವರಲ್ಲ. **(No formal Education)**

ವಿವಾಹ

ಕಸ್ತೂರ್‌ಬಾ ಅವರ ತಂದೆ ಗೋಕುಲದಾಸ್ ಮಾಕಂಜಿ ಅವರೂ ಮತ್ತು ಮೋಹನ್‌ದಾಸ್ ಕರಮ್‌ಚಂದಗಾಂಧಿ ಅವರ ತಂದೆ ಕಾ.ಬಾ. ಗಾಂಧಿ (ಕರಮ್‌ಚಂದ ಗಾಂಧಿ) ಅವರು ಆಪ್ತ ಸ್ನೇಹಿತರು. ಅವರೀರ್ವರ ಕುಟುಂಬದ ಬಾಂಧವ್ಯವನ್ನು ಬೆಳೆಸಿ ಉಳಿಸುವ ಸಲುವಾಗಿ ಗೋಕುಲದಾಸ್ ಅವರು ತಮ್ಮ ಏಕೈಕ ಪುತ್ರಿಯನ್ನು ಮಿತ್ರರಾದ ಕಾಬಾ ಗಾಂಧಿ ಅವರ ಪುತ್ರ ಮೋಹನ್‌ದಾಸ್‌ರೊಂದಿಗೆ ವಿವಾಹ ಮಾಡುವುದಾಗಿ ಮಾತು ಕೊಟ್ಟರು. ಅವರ ಸ್ನೇಹಮಯ ಜೀವನಕ್ಕೆ ನೆಂಟಸ್ತಿಕೆಯ ಬಂಧನವೂ ಬೆಸೆಯಿತು.

ಕಸ್ತೂರ್‌ಬಾ ಹಾಗೂ ಮೋಹನ್‌ದಾಸ್ ಕರಮ್‌ಚಂದ ಗಾಂಧಿ ಅವರ ವಿವಾಹವೂ ಜರುಗಿತು. ಮದುವೆಯಾದಾಗ ಇಬ್ಬರಿಗೂ 13 ವರ್ಷ ವಯಸ್ಸು. ಕಸ್ತೂರ್‌ಬಾರವರೇ ಗಾಂಧೀಜಿ ಅವರಿಗಿಂತ ಆರು ತಿಂಗಳು ಹಿರಿಯರಾಗಿದ್ದರು. ಎರಡೂ ಮನೆತನದ ಗೌರವ ವಿಶ್ವಾಸದ ಬಾಂಧವ್ಯವನ್ನು ಉಳಿಸುವ ಸಲುವಾಗಿ ಮಾಡಿದ ಮದುವೆಗೆ ವಯಸ್ಸಿನ ಏರುಪೇರು ಅಡ್ಡ ಬರಲಿಲ್ಲ. ಆದರೆ, ಆ ವಯಸ್ಸಿನ ಮದು ಮಕ್ಕಳಿಗೆ ಮದುವೆಯ ಅರ್ಥವೇ ತಿಳಿದಿರಲಿಲ್ಲ. ಮದುವೆ ಎಂದರೇನು? ಸಂಸಾರ ಹೂಡುವುದೆಂದರೇನು? ಎಂಬ ಪರಿಕಲ್ಪನೆಯೂ ಇರಲಿಲ್ಲ. ಅದು ಕೇವಲ ಒಂದು ಆಟವಾಗಿತ್ತು. ಹೊಸ ಬಟ್ಟೆಗಳನ್ನು ಉಡುವ ಸಂಭ್ರಮ. ತಿನ್ನಲು ಬೇಕಾದ ತಿಂಡಿ ತಿನಿಸುಗಳು ಲಭ್ಯವಿತ್ತು. ಆಟಕ್ಕೆ ಒಬ್ಬರಿಗೊಬ್ಬರ ಜೊತೆ ಸಿಕ್ಕಿದ ಹುಮ್ಮಸ್ಸು. ಮನೆಯ ತುಂಬ ನೆಂಟರಿಷ್ಟರು. ಗಾಂಧೀಜಿ ದಂಪತಿಗಳಿಗೆ ಅದು ಅತಿ ಸಂತೋಷದ ವಾತಾವರಣವಾಗಿತ್ತು.

ನಂತರದ ದಿನಗಳಲ್ಲಿ ಗಾಂಧೀಜಿ ಅವರಿಗೆ, ತನ್ನ ಹೆಂಡತಿ ವಿದ್ಯಾವಂತಳಲ್ಲ ಎಂಬುದು ಮನವರಿಕೆಯಾಯಿತು. ಆಕೆಗೆ ವಿದ್ಯೆ ಕಲಿಸುವ ಪ್ರಯತ್ನ ಮಾಡಿದರು. ಮನೆಯಲ್ಲಿ ತಾನೇ ಸ್ವತ: ಶಿಕ್ಷಕನಂತೆ ಖುದ್ದಾಗಿ ಶ್ರಮವಹಿಸಿ ಪಾಠ ಹೇಳಿ ಕೊಡಲು ಪ್ರಾರಂಭ ಮಾಡಿದರು. ಎಳೆ ಪ್ರಾಯದ ಕಸ್ತೂರ್‌ಬಾ ಅವರು ಬಹಳ ಕಷ್ಟಪಟ್ಟು ಗುಜರಾತಿ ಭಾಷೆಯನ್ನು ಕಲಿತರು. ಆದರೆ ತಾನು ಮೊದಲೇ ಕಲಿಯಬೇಕಾಗಿತ್ತು ಎಂಬ ನೋವು ಕಾಡುತ್ತಿತ್ತು. ಮುಂದೆ ಕಲಿಯುವ ಆಸೆ ಬತ್ತಿ ಹೋಯಿತು.

ಗಾಂಧಿ ಅವರು ವಿದ್ಯಾಭ್ಯಾಸವನ್ನು ಮುಂದುವರೆಸಲು 1888ರಲ್ಲಿ ಲಂಡನ್ನಿಗೆ ತೆರಳಿದಾಗ ಕಸ್ತೂರ್‌ಬಾ ಅವರು ತಮ್ಮ

ಹಸುಗೂಸು ಹರಿಲಾಲ್ ಗಾಂಧಿಯ ಜೊತೆ ಭಾರತದಲ್ಲೇ ಉಳಿದುಕೊಂಡರು.

ಬಾರಿಸ್ಟರ್ ಪದವಿಗಳಿಸಿದ ಮೋಹನ್‌ದಾಸ್ ಅವರು 1891 ರಲ್ಲಿ ಭಾರತಕ್ಕೆ ಮರಳಿ ಬಂದರು. ಪತಿಯ ತಾತ್ಕಾಲಿಕ ಅಗಲಿಕೆಯಿಂದ ಬಳಲಿದ್ದ ಬಾ, ಅವರಿಗೆ ಒಂದು ಕಡೆ ಸಂತೋಷ, ಮತ್ತೊಂದು ಕಡೆ ಆತನ ತಾಯಿ ಮತ್ತು ಹಿರಿಯ ಅತ್ತಿಗೆ ನಿಧನರಾದುದನ್ನು ತಿಳಿದು ನೋಯುವರೆಂಬ ಸಂಕಟ.

ಬಾರಿಸ್ಟರ್ ಗಾಂಧಿ ಅವರಿಗೆ, ಕಸ್ತೂರ್‌ಬಾ ವಿದ್ಯಾವಂತಳಾಗಬೇಕೆಂಬ ಹಂಬಲ ಮತ್ತೆ ಕಾಡತೊಡಗಿತು. ಅವರು ಪಾಶ್ಚಿಮಾತ್ಯ ದೇಶದಲ್ಲಿ ಮಹಿಳೆಯರು ಎಷ್ಟು ಮುಂದುವರೆದಿದ್ದಾರೆ ಎಂಬುದನ್ನು ಹತ್ತಿರದಿಂದ ನೋಡಿದ್ದರು. ಅಂತೆಯೇ ತನ್ನ ಪತ್ನಿಯೂ ಇರಬೇಕೆಂಬ ಬಯಕೆ ಅವರಲ್ಲಿ ಹೆಚ್ಚಾಗಿತ್ತು. 'ಬಾ' ಅವರಿಗೆ ಪುನ: ಪಾಠ ಕಲಿಸಲು ಪ್ರಾರಂಭ ಮಾಡಿದರು. ಈಗ ಆಂಗ್ಲ ಭಾಷೆಯ ಬೋಧನೆಯಾಯಿತು. ದೊಡ್ಡ ಸಂಸಾರದ ಹೊರೆ ಹೊತ್ತ ಬಾ ಅವರಿಗೆ ಪತಿ ಮರಳಿ ಬಂದದ್ದರಿಂದ ಮನಸ್ಸು ಸ್ವಲ್ಪ ಹಗುರವಾದರೆ, ಮತ್ತೊಂದು ಕಷ್ಟ ತಲೆ ಎತ್ತಿತ್ತು. ಅವರಿಗೆ ಆಂಗ್ಲ ಭಾಷೆಯನ್ನು ಕಲಿಯುವ ಆಸಕ್ತಿ ಎಳ್ಳಷ್ಟೂ ಇರಲಿಲ್ಲ.

ದಕ್ಷಿಣ ಆಫ್ರಿಕಾಗೆ ಪ್ರಯಾಣ

ಬಾರಿಷ್ಟರ್ ಗಾಂಧಿ 1893 ರಲ್ಲಿ ವಕೀಲಿ ವೃತ್ತಿಗಾಗಿ ದಕ್ಷಿಣ ಆಫ್ರಿಕಾಕ್ಕೆ ಒಬ್ಬರೇ ಪ್ರಯಾಣ ಬೆಳೆಸಿದರು. ಎರಡನೆಯ ಬಾರಿ ಪತ್ನಿ ಮತ್ತು ಪುತ್ರರ ಸಮೇತ ದಕ್ಷಿಣ ಆಫ್ರಿಕಾಗೆ ಪಯಣ ಬೆಳೆಸಿದರು. ಪ್ರಥಮ ಬಾರಿಗೆ ದಕ್ಷಿಣ ಆಫ್ರಿಕಾದಲ್ಲಿ ಜನಪರ ಹೋರಾಟಗಳಲ್ಲಿ ಭಾಗಿಯಾಗಿ ಬಹಳಷ್ಟು ಜನಪ್ರಿಯರಾಗಿದ್ದರು.

ಆದ್ದರಿಂದ ಆಫ್ರಿಕಾದಲ್ಲಿ ಪ್ರಸಿದ್ಧರಾಗಿದ್ದ ಪತಿಯೊಡನೆ ಸಣ್ಣ ಮಕ್ಕಳನ್ನು ಕರೆದುಕೊಂಡು ಬಹಳ ಹೆಮ್ಮೆಯಿಂದ ಹೊರಟರು ಕಸ್ತೂರ್‌ಬಾ ಅವರು. ಸಮುದ್ರಯಾನ ಮಾಡುವಾಗ ಎಳುತ್ತಿದ್ದ ಭಯಂಕರ ಬಿರುಗಾಳಿ, ಬೃಹತ್ ಅಲೆಗಳಿಗೆ ಹಡಗು ಸಿಲುಕಿಕೊಂಡಾಗ ಹೆದರಿಕೊಳ್ಳುತ್ತಿದ್ದ ಮಕ್ಕಳಿಗೆ ಪ್ರಾರ್ಥನೆ ಹೇಳಿಕೊಡುವ ಮೂಲಕ ಸಾಂತ್ವನ ಹೇಳುತ್ತಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಬಿಳಿಯ ಜನಾಂಗದವರು ಮಾಡುತ್ತಿದ್ದ **(Apartheid)** ವರ್ಣಭೇದದ ಅಪಮಾನವನ್ನು ಸಹಿಸಿಕೊಳ್ಳಬಾರದೆಂದು ಗಾಂಧೀಜಿ ಹೇಳುತ್ತಿದ್ದರು. ಇವರ ಮಾರ್ಗದರ್ಶನ ಬೇಕೆಂದು ಜನ ಕೋರಿಕೊಳ್ಳುತ್ತಿದ್ದರು. ಇದರ ಹಿನ್ನೆಲೆಯಲ್ಲಿ ಗಾಂಧೀಜಿ ಅವರು ಸಂಸಾರ ಸಮೇತರಾಗಿ ಬಂದಾಗ ನೆಟಾಲ್‌ನಲ್ಲಿ ಬಿಳಿಯರು ಅವರ ಹಡಗನ್ನು ಬಿಡದೆ ತಡೆದು ಗಲಾಟೆ ಮಾಡಿದ್ದರು. ಈ ಗಲಾಟೆಯಲ್ಲಿ ಅವರ ಮೈಕೈಯೆಲ್ಲಾ ಗಾಯಗಳಾದವು.

ಏನೂ ತಿಳಿಯದ ಕಸ್ತೂರ್‌ಬಾ ಅವರು ಸಣ್ಣ ಮಕ್ಕಳನ್ನು ಕಟ್ಟಿಕೊಂಡು ಭಾಷೆ ತಿಳಿಯದ ಪರದೇಶಕ್ಕೆ ಬಂದಾಗ, ಪತಿಯ ಪರಿಸ್ಥಿತಿ ಬಗ್ಗೆ ಕಂಗೆಟ್ಟರು. ಗಾಂಧೀಜಿ ಅವರ ಹಿತಚಿಂತಕರಾದ ಕೆಲವರು ಕಸ್ತೂರ್‌ಬಾ ಮತ್ತು ಮಕ್ಕಳನ್ನು ಸುರಕ್ಷಿತವಾಗಿ ರುಸ್ತುಂಜೀ ಅವರ ಮನೆ ಸೇರಿಸಿದರು. ಗಲಾಟೆಯ ನಂತರ ಗಾಂಧೀಜಿ ಅವರು ದುರವಸ್ಥೆಯಲ್ಲಿ ಬಂದದ್ದನ್ನು ಕಂಡು ಕಸ್ತೂರ್‌ಬಾ ನಡುಗಿ ನೀರಾದರು. ದೇವರಲ್ಲಿ ಮೊರೆಯಿಡುವುದೊಂದೇ ಅವರ ಮಾರ್ಗವಾಗಿತ್ತು.

ಗಾಂಧೀಜಿ ಅವರು ತಾವು ಪತಿ ಎಂಬ ದರ್ಪವನ್ನು ಕಸ್ತೂರ್‌ಬಾ ಮೇಲೆ ತೋರಿದ್ದುಂಟು. ಆಗಿನ ಕಾಲದಲ್ಲಿ

ಶೌಚಾಲಯಗಳು ಸೌಲಭ್ಯಗಳಿಲ್ಲದುದರಿಂದ ಪ್ರತ್ಯೇಕ ಪಾತ್ರೆಯಲ್ಲಿ ಮಲಮೂತ್ರ ಮಾಡಿ ಪಾತ್ರೆಯನ್ನು ತಾವೇ ಶುಚಿ ಮಾಡುವ ಪದ್ಧತಿ ಇತ್ತು. ದಕ್ಷಿಣ ಆಫ್ರಿಕಾದ ಆಶ್ರಮದಲ್ಲಿ ಒಮ್ಮೆ ಅಸ್ಪೃಶ್ಯ ಭಾರತೀಯನೊಬ್ಬನ ಪಾತ್ರೆಯನ್ನು ಗಾಂಧೀಜಿ ಆದೇಶದಂತೆ ಕಸ್ತೂರ್‌ಬಾ ಅವರೇ ಮಾಡಬೇಕಾಗಿ ಬಂತು. ಅವರು ಕಣ್ಣಂಚಿನಲ್ಲಿ ಕಣ್ಣೀರು ತಂದುಕೊಂಡು ಶುಚಿ ಮಾಡಲು ಇಷ್ಟ ಪಡದೇ ಇದ್ದುದಕ್ಕೆ ಗಾಂಧೀಜಿ ಅವರು ಸಿಟ್ಟಿನಿಂದ ಬಾ ಅವರನ್ನು ಮನೆಯಿಂದ ರಟ್ಟೆ ಹಿಡಿದು ಹೊರ ಹಾಕಲನುವಾದರು. ಬಾ ಅವರು ಕಾಡಿ ಬೇಡಿ "ಪರದೇಶದಲ್ಲಿ ನನ್ನನ್ನು ಹೀಗೆ ನಿಲ್ಲಿಸಬಹುದೇ? ಮತ್ತೆ ಹೊರಗಿನ ಜನ ನಮ್ಮ ಸಂಸಾರದ ಬಗ್ಗೆ ಏನೆಂದಾರು?" ಎಂದು ಕಣ್ಣೀರಿಡುತ್ತಾ ಪ್ರಶ್ನಿಸಿದ್ದರು. ಇದರಿಂದಾಗಿ, ಗಾಂಧಿ ಅವರಿಗೆ 'ತಾನು ತಪ್ಪು ಮಾಡಿದೆ' ಅನ್ನಿಸಿತ್ತು. ಮತ್ತು ಒತ್ತಾಯದಿಂದ, ಹಿಂಸೆಯಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಅಹಿಂಸೆಯಿಂದ ಮತ್ತು ಪ್ರೀತಿಯಿಂದ ಮಾತ್ರ ಸಾಧ್ಯವಾಗುವುದು ಎಂದು ಅರಿತರು. ಆಮೇಲೆ ಗಾಂಧಿ 'ಬಾ' ಅವರನ್ನು ಮನೆಯೊಳಗಿರಲು ಅನುಮತಿ ಕೊಟ್ಟರು.

1905ರ ವೇಳೆಗೆ ಗಾಂಧೀಜಿ ಅವರು ಜೋಹಾನ್ಸ್ ಬರ್ಗ್ ನಗರದಲ್ಲಿ ಪ್ರಸಿದ್ಧ ವಕೀಲರಾಗಿದ್ದರು. ಒಳ್ಳೆಯ ವರಮಾನವೂ ಸಿಗುತ್ತಿತ್ತು. ಬಂಗಲೆಯನ್ನು ಬಾಡಿಗೆಗೆ ತೆಗೆದುಕೊಂಡು ಕೆಲಕಾಲ ಜೀವನ ನಡೆಸಿದರು. ನಂತರದ ದಿನಗಳಲ್ಲಿ ಎಲ್ಲವನ್ನೂ ಬಿಟ್ಟು ಶುದ್ಧ ಪರಿತ್ಯಾಗಿಗಳಾದರು. ಹುಟ್ಟಾರಭ್ಯ ಸಂಪ್ರದಾಯಸ್ಥರ ಮನೆಯಲ್ಲಿ ಬೆಳೆದ ಕಸ್ತೂರ್‌ಬಾ, ಆಚಾರ ವಿಚಾರಗಳನ್ನು ಸಮಯೋಚಿತವಾಗಿ ಅಳವಡಿಸಿಕೊಂಡರು. ಆಂಗ್ಲ ಯುವಕರು ಗಾಂಧೀಜಿ ಅವರೊಡನೆ

ವಕೀಲಿ ವೃತ್ತಿ ಮಾಡುತ್ತಿದ್ದರು. ಕಸ್ತೂರ್‌ಬಾ ಅವರೊಡನೆ ಮಾತನಾಡುತ್ತಾ ಇಂಗ್ಲೀಷ್ ಭಾಷೆಯಲ್ಲಿ ಮಾತನಾಡುವುದನ್ನು ಅಲ್ಪಸ್ವಲ್ಪ ಕಲಿತರು. ಅಪಮಾನ, ಅನ್ಯಾಯಕ್ಕೆ ತಲೆ ಬಾಗದ ದಿಟ್ಟ ಮಹಿಳೆಯಾಗಿ ಕಸ್ತೂರ್‌ಬಾ ಬೆಳೆದರು.

ಹೋರಾಟಕ್ಕೆ ಪ್ರವೇಶ

1906 ರಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಲು ನಿರ್ಧರಿಸಿದ ಗಾಂಧೀಜಿ ಗೃಹಕೃತ್ಯದ ಹೊಣೆಗಾರಿಕೆಯನ್ನು ಕಡಿಮೆ ಮಾಡಿಕೊಳ್ಳುತ್ತಾ, ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿದರು. ಬಾ ಅವರು ಕಾಯಾ, ವಾಚಾ, ಮನಸಾ ಅವರ ವ್ರತಕ್ಕೆ ನೆರವಾದರು. ತಾವೂ ಸ್ವಾತಂತ್ರ ಸಮರಕ್ಕೆ ಧುಮುಕಿದರು. ಡರ್ಬಾನ್ ನಗರ ಸಮೀಪದ ಫೀನಿಕ್ಸ್‌ನಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿದರು. ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರು ಇಲ್ಲಿ ಗಾಂಧೀಜಿ ಅವರೊಂದಿಗೆ ವಾಸಿಸತೊಡಗಿದರು. ಗಾಂಧೀಜಿ ಅವರಿಗೆ ಬಿಡುವಿಲ್ಲದ ವೇಳೆಯಲ್ಲಿ ಹಲವು ಬಾರಿ ಕಸ್ತೂರ್‌ಬಾ ಅವರೇ ಜನರೊಂದಿಗೆ, ಕಾರ್ಯಕರ್ತರೊಂದಿಗೆ ಚರ್ಚಿಸುತ್ತಿದ್ದರು. ಗಾಂಧೀಜಿ ಅವರು ಜೈಲಿನಲ್ಲಿರುವಾಗ, ಅವರ ಕೆಲಸ ಕಾರ್ಯಗಳನ್ನು ಮತ್ತು ಹೋರಾಟಗಳನ್ನು ತಾವೇ ಮುಂದುವರೆಸುತ್ತಿದ್ದರು. ಕೊನೆಗೆ ಇವರು ಸಹ 6 ತಿಂಗಳ ಜೈಲುವಾಸ ಅನುಭವಿಸಿದರು. ಅವರ ಬಿಡುಗಡೆಯ ದಿನ ಗಾಂಧೀಜಿ ಸ್ವತ: ತಾವೇ ಕಾರಾಗೃಹದ ಬಳಿ ಹೋಗಿ, ಸೊರಗಿ ಕ್ಷೀಣಿಸಿ ಬಡಕಲಾದ 'ಬಾ', ಅವರನ್ನು ಮನೆಗೆ ಕರೆದುಕೊಂಡು ಬಂದಿದ್ದರು.

ಮರಳಿ ಭಾರತಕ್ಕೆ

ಗಾಂಧೀಜಿ ದಂಪತಿಗಳು ದಕ್ಷಿಣ ಆಫ್ರಿಕಾದಲ್ಲಿ ಸುಮಾರು 21 ವರ್ಷಗಳ ಕಾಲ ಅಲ್ಲಿನ ಭಾರತೀಯರೊಡನೆ ಜೀವನ ನಡೆಸಿ, ಅವರಿಗಾಗಿ ಅಮೂಲ್ಯ ಸೇವೆ ಸಲ್ಲಿಸಿ, ಸೆರೆಮನೆವಾಸ ಅನುಭವಿಸಿ, ಆಶ್ರಮಕಟ್ಟಿ, ಎಲ್ಲರೊಂದಿಗೆ ಸಂಘ ಜೀವಿಗಳಾಗಿದ್ದರು. ಅವರು ಕೊನೆಗೊಂದು ದಿನ ಭಾರತಕ್ಕೆ ಹಿಂತಿರುಗಬೇಕಾಯಿತು. ಅಲ್ಲಿ ಬೀಳ್ಕೊಡುಗೆಯ ಸಮಾರಂಭವನ್ನು ಏರ್ಪಡಿಸಿದ್ದರು. ದಕ್ಷಿಣ ಆಫ್ರಿಕಾದ ಸ್ನೇಹಮಯಿ ಭಾರತೀಯ ಸ್ನೇಹಿತರು ತಮ್ಮ ಪ್ರೀತಿ ವಿಶ್ವಾಸಗಳನ್ನು ವ್ಯಕ್ತಪಡಿಸಲು 'ಬಾ' ಅವರಿಗೆ ಉಡುಗೊರೆಗಳನ್ನು ನೀಡಿದರು. ಚಿನ್ನ, ಬೆಳ್ಳಿ, ವಜ್ರದ ಒಡವೆಗಳನ್ನು ಕಂಡು ನಿರಾಭರಣ ಸುಂದರಿಯಾದ ಬಾರವರಿಗೆ ಒಂದು ಸಣ್ಣ ಆಸೆ ಮೂಡಿತು. ತನಗಾಗಿ ಮತ್ತು ಅಲ್ಪವಾದರೂ, ತನ್ನ ನಾಲ್ಕು ಜನ ಗಂಡುಮಕ್ಕಳ ಮಡದಿಯರಿಗಾಗಿ ಒಡವೆಗಳನ್ನು ಉಳಿಸಿಕೊಳ್ಳುವ ಮನಸ್ಸಾಯಿತು. ಆದರೆ ಗಾಂಧೀಜಿ ಅವರು ಒಪ್ಪಬೇಕಲ್ಲ, ಒಪ್ಪುವಂತಿಲ್ಲ. ಕಸ್ತೂರ್‌ಬಾ ಮರುಮಾತನಾಡದೆ ನಿಶ್ಚಿಲವಾಗಿ ನಿಟ್ಟುಸಿರು ಬಿಟ್ಟರು. ಕಣ್ಣಲ್ಲಿ ನೋಡಿಯೇ ಸಮಾಧಾನಗೊಂಡರು

ಮತ್ತೆ ಭಾರತದಲ್ಲಿ

ಭಾರತಕ್ಕೆ ಹಿಂತಿರುಗಿದ ನಂತರ 'ಬಾ ದಂಪತಿ'ಗಳು ಕೊಚರಬ್ ಎಂಬಲ್ಲಿ ಆಶ್ರಮ ಸ್ಥಾಪಿಸಿ, ಅಲ್ಲಿಯೇ ವಾಸಿಸತೊಡಗಿದರು. ಅವರ ಎಲ್ಲಾ ಒಡನಾಡಿಗಳು ಅಲ್ಲಿ ವಾಸಿಸುತ್ತಿದ್ದರು. ಬಾ ಅವರ ವೇಷ ಭೂಷಣಗಳು ಬದಲಾದವು. ಬಿಳಿಯ ಖಾದಿ ಸೀರೆ ಹಾಗೂ ಕೈಯಲ್ಲಿ ಎರಡು ಗಾಜಿನ ಬಳೆಗಳು, ಅವರು ಉಡುಪು ತೊಡಪಾಯಿತು.

ಸಬರಮತಿ ಆಶ್ರಮ

ಸಬರಮತಿ ನದಿ ದಂಡೆಯ ಮೇಲೆ ವಿಶಾಲವಾದ ಪ್ರದೇಶದಲ್ಲಿ ಆಶ್ರಮ ಸ್ಥಾಪನೆಯಾಯಿತು. ಕೂಡಲೇ ಕೊಚರಬ್‌ನ ಆಶ್ರಮವಾಸಿಗಳೆಲ್ಲ ಸಬರಮತಿ ಆಶ್ರಮದಲ್ಲೂ ನೆಲಸಿದರು. ಎಲ್ಲಾ ಜನಾಂಗದವರೂ ಸಕುಟುಂಬ ಪರಿವಾರ ಸಮೇತರಾಗಿ ಬಂದು ಆಶ್ರಮದ ಎಲ್ಲಾ ನಿಯಮಗಳಿಗೂ ಬದ್ಧರಾಗಿ, ಸೇವಾ ಮನೋಭಾವ, ಸಾತ್ವಿಕ ಭಾವನೆಗಳಿಂದ 'ವಿಶ್ವಬಂಧುತ್ವ'ವನ್ನು ಬೆಳೆಸಿಕೊಂಡರು. ತಾಯಿ ಬಾ ಅವರು ಆಶ್ರಮದಲ್ಲಿ ಮಮತೆಯ ಸ್ಥಾನವನ್ನು ತುಂಬಿದರು. ಆಶ್ರಮದಲ್ಲಿದ್ದವರಿಗೆಲ್ಲಾ ಖಾದಿ ನೇಯುವುದು ಕಡ್ಡಾಯವಾಗಿತ್ತು. ಬಾ ಅವರು ತಮ್ಮ ಜೊತೆಯ ಮಹಿಳೆಯರ ಸಹಕಾರದಿಂದ ಹಳ್ಳಿಯ ಮಕ್ಕಳಿಗೆ ಅಕ್ಷರ ಜ್ಞಾನ, ಆರೋಗ್ಯ ನಿಯಮ, ಸ್ವಚ್ಛತೆಗಳನ್ನು ಕಲಿಸುತ್ತಿದ್ದರು. ರೈತರ ಸಂಕಷ್ಟಗಳನ್ನು ವಿಚಾರಿಸಲು ಬಾಪು ಮುಂದಾಗುತ್ತಿದ್ದರು. ಹೀಗೆ ಬಾಪು ದಂಪತಿಗಳು ಅನ್ಯರ ಅನುಕೂಲಕ್ಕಾಗಿ ದೇಶದ ಏಳಿಗೆಗಾಗಿ ದುಡಿಯುತ್ತಿದ್ದರು.

1939ರಲ್ಲಿ ರಾಜ್‌ಕೋಟ್‌ನಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತ್ತಿತ್ತು. ಕಸ್ತೂರ್‌ಬಾ ಅವರು ತನ್ನ ತವರೂರಾದ ರಾಜ್‌ಕೋಟ್‌ನಲ್ಲಿ ಸೇವೆ ಮಾಡಬೇಕೆಂದು ಆರೋಗ್ಯ ಸರಿ ಇಲ್ಲದಿದ್ದರೂ, ಹೋಗಿ ಹೋರಾಟದಲ್ಲಿ ಪಾಲ್ಗೊಂಡರು ಮತ್ತು ಸೆರೆಮನೆ ಸೇರಬೇಕಾದ ಪರಿಸ್ಥಿತಿಯು ಬಂದಿತ್ತು.

ಭಾರತ ಬಿಟ್ಟು ತೊಲಗಿರಿ ಚಳುವಳಿ

ಬಾ ಅವರು ರಾಜಕೀಯ ರಂಗದಲ್ಲಿ ಕೊನೆಯದಾಗಿ ಪಾಲ್ಗೊಂಡಿದ್ದು 1942ರಲ್ಲಿ. 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' (Quit India Movement) ಎಂಬ ಕರೆ ಬಾಪೂ ಅವರ 'ಹರಿಜನ ಪತ್ರಿಕೆ'ಯಲ್ಲಿನ ಲೇಖನದಿಂದ ಎಲ್ಲೆಡೆಯೂ ಹರಡಿತು. ಕಸ್ತೂರ್‌ಬಾ ಅವರು ಸಂಜೆ ಸಭೆ ನಡೆಸುತ್ತಿದ್ದರು. ಅಲ್ಲಿನ ಚರ್ಚೆಯು ಇದೇ ವಿಷಯವಾಗಿತ್ತು. 'ಹರಿಜನ ಬಂಧು' ಪತ್ರಿಕೆಯಲ್ಲಿ ಪ್ರಕಟವಾದ ಈ ಬರಹವನ್ನು ನೋಡಿದ ಬಾ ಅವರು, ಇದರ ಬಗ್ಗೆ ಮತ್ತು ಇದರ ಪರಿಣಾಮದ ಬಗ್ಗೆ ಚಿಂತಿಸತೊಡಗಿದರು. "ಈ ವಿಷಯವನ್ನು ಗಮನಿಸಿದ ಬ್ರಿಟಿಷ್ ಸರ್ಕಾರವು ಗಾಂಧೀಜಿ ಅವರನ್ನು ಮತ್ತೆ ಸೆರೆಮನೆಗೆ ಕಳುಹಿಸಬಹುದು ಅಥವಾ 'ಹರಿಜನ ಬಂಧು' ಪತ್ರಿಕೆಯನ್ನು ಬಹಿಷ್ಕಾರ ಹಾಕಿ ನಿಲ್ಲಿಸುವುದು ಖಾತ್ರಿ" ಎಂದು ಅವರಿಗೆ ಅನ್ನಿಸತೊಡಗಿತು.

ಕಾಂಗ್ರೆಸ್ ಮಹಾಸಮಿತಿಯಲ್ಲಿ ಭಾಗವಹಿಸಲು ಬೊಂಬಾಯಿಗೆ ಹೊರಡಲು ಬಾಪೂ ಅವರು ಸಿದ್ಧರಾದರು. ಅದನ್ನು ಕಂಡ ಬಾ ಅವರೂ ತಾವೂ ಬರುವುದಾಗಿ ಹಠ ಹಿಡಿದರು. ಹೊರಡುವ ಮುನ್ನ ತಮ್ಮ ಮೊಮ್ಮಗಳಾದ ಮನುಬಹೆನ್‌ಳನ್ನು ಕರೆದು ಒಂದು ಕೆಂಪು ಅಂಚಿನ ಬಿಳಿಯ ಸೀರೆಯನ್ನು ಕೊಟ್ಟು, ಇದು ಬಾಪೂ ಅವರು ತಾವೇ ತೆಗೆದ ನೂಲಿನಿಂದ ನೇಯಿಸಿದ ಸೀರೆಯಾದ್ದರಿಂದ ತಮ್ಮ ಅಂತಿಮ ಕಾಲಕ್ಕೆ ಈ ಸೀರೆಯನ್ನು ಹೊದಿಸಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದರು. ಹೊರಡುವ ಸಮಯ ಬಂದಿತು. ಆಶ್ರಮವಾಸಿಗಳು ಅತಿ ಮೌನದಿಂದ ದು:ಖ ತುಂಬಿದ ಭಾರವಾದ ಹೃದಯದಿಂದ ಬಾ ದಂಪತಿಗಳನ್ನು ಬೀಳ್ಕೊಟ್ಟರು.

ತಾವು ಮತ್ತೆ ಆಶ್ರಮಕ್ಕೆ ಹಿಂತಿರುಗುವ ಸಾಧ್ಯತೆ ಇಲ್ಲವೆಂಬುದನ್ನು ತಿಳಿದಿದ್ದ ಬಾಪು ದಂಪತಿಗಳು ಆಶ್ರಮಕ್ಕೆ ಅಂತಿಮ ನಮನ ಸಲ್ಲಿಸಿದರು.

ಬೊಂಬಾಯಿಗೆ ಹೋದ ಮೇಲೆ ಬಾಪು ಅವರು ದೇಶಾದ್ಯಂತ ಕೊಟ್ಟ ಸಂದೇಶವೆಂದರೆ "ಮಾಡು ಇಲ್ಲವೇ ಮಡಿ" ಬೊಂಬಾಯಿಯಲ್ಲಿ ನಡೆದ (ಎ.ಐ.ಸಿ.ಸಿ) ಅಧಿವೇಶನದಲ್ಲಿ ಗಾಂಧೀಜಿ ಅವರು ತಮ್ಮ ಮನದಾಳದ ಅಳಲನ್ನು ತೋಡಿಕೊಂಡರು. ತಮ್ಮ ಚಟುವಟಿಕೆಗಳನ್ನು ಮುಂದುವರಿಸುತ್ತಾ ಶಿವಾಜಿ ಪಾರ್ಕಿನಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುವವರಿದ್ದರು. ಇದನ್ನು ಮುಂಗಡವಾಗಿ ತಿಳಿದ ಬ್ರಿಟಿಷ್ ಸರ್ಕಾರ ಇವರನ್ನು ದಸ್ತಗಿರಿ ಮಾಡಿತು. ಕಸ್ತೂರ್‌ಬಾ ಅವರು ತನ್ನಿಚ್ಛೆಯಂತೆ ಗಾಂಧೀಜಿ ಅವರ ಜೊತೆ ಹೋಗಲು ಅನುಮತಿ ಇತ್ತು. ಆದರೆ ಗಾಂಧೀಜಿ ಅವರಿಗೆ ಅವರ ಕೆಲಸವೇ ಪ್ರಧಾನವಾಗಿತ್ತು. ಅಂತೆಯೇ 'ಬಾ' ಅವರಿಗೆ ತಮ್ಮ ಕಾರ್ಯಕ್ರಮವನ್ನು ಮುನ್ನಡೆಸುವಂತೆ ತಿಳಿಸಿ ಹೊರಟಿದ್ದರು.

ಸೆರೆಮನೆಗೆ ಕಸ್ತೂರ್‌ಬಾ

ಕಸ್ತೂರ್‌ಬಾ ಮತ್ತು ಅವರ ವೈದ್ಯರಾದ ಡಾ. ಸುಶೀಲ ಅವರು ಶಿವಾಜಿ ಪಾರ್ಕಿನ ಬಹಿರಂಗ ಸಭೆಗೆ ಬಂದ ಕೂಡಲೇ ಅವರನ್ನು ಬಂಧಿಸಲಾಯಿತು. ಅದಲ್ಲದೆ ದೇಶದ ಅನೇಕ ಮುಖಂಡರನ್ನು ದಸ್ತಗಿರಿ ಮಾಡಿದರು. ಕಸ್ತೂರ್‌ಬಾ ಮತ್ತು ಡಾ. ಸುಶೀಲ ಅವರನ್ನು ಅರ್ಥರ್ ರೋಡ್ ಸೆರೆಮನೆಯಲ್ಲಿಟ್ಟರು. ಬಳಲಿದ್ದ ಶರೀರವನ್ನು ಹೊತ್ತು ನಡೆಯಲು ಕಷ್ಟ ಪಡುತ್ತಿದ್ದ ಕಸ್ತೂರ್‌ಬಾ ಅವರ ಮನಸ್ಸಿನಲ್ಲಿ "ಇನ್ನು ಜೀವಂತವಾಗಿ ಸೆರೆಮನೆಯಿಂದ ನಾನು ಹೊರಬರಲಾರೆ" ಎಂಬ ಅರಿವು ಮೂಡಿತ್ತು.

ಕಸ್ತೂರ್‌ಬಾ ಅವರು ದಕ್ಷಿಣ ಆಫ್ರಿಕಾದಲ್ಲಿದ್ದಾಗಲೂ ಅನೇಕ ವೇಳೆ ಅಲ್ಲಿನ ಭಾಷೆಯೂ ತಿಳಿಯದೆ ಕಠೋರವಾದ ಕಾರಾಗೃಹವಾಸ ಮಾಡಿದ್ದರು. ಆದರೆ ಮುಪ್ಪಿನಲ್ಲಿ, ಕಾಯಿಲೆಯಿಂದ ಕುಗ್ಗಿದ ದೇಹ ಮತ್ತು ಸೊರಗಿದ ಮನಸ್ಸಿನಲ್ಲಿ ಸೆರೆಮನೆವಾಸ ಅನುಭವಿಸುವುದು ಕಷ್ಟಕರವಾಗಿತ್ತು. ಅವರ ಅನಾರೋಗ್ಯದ ಕಾರಣದಿಂದ, ಸೆರೆಮನೆ ವಾತಾವರಣದಲ್ಲಿ ಬದುಕುವುದೇ ಕಷ್ಟವಾಗಿತ್ತು.

ಆಗಾಖಾನ್ ಸೆರೆಮನೆಯಲ್ಲಿ ನಿಧನ

ಅಂದು ರಾತ್ರಿ ಸೂಪರಿಂಟೆಂಡೆಂಟರು ಕಸ್ತೂರ್‌ಬಾ ಹಾಗೂ ಅವರ ಆತ್ಮೀಯರಾದ ಡಾ. ಸುಶೀಲಾ ಅವರನ್ನು ರೈಲಿನಲ್ಲಿ ಕರೆದುಕೊಂಡು ಹೋದರು. ಅಲ್ಲಿಂದ ಪ್ರಸಿದ್ಧ ಆಗಾಖಾನ್ ಅರಮನೆಗೆ (ಆಗಾಖಾನ್ ಮಹಲ್) ಕರೆದೊಯ್ದರು. ಪ್ರತಿ ಹೆಬ್ಬಾಗಿಲಿಗೂ ಸಶಸ್ತ್ರ ಪಹರೆಯವರು ಕಾವಲು ಕಾಯುತ್ತಿದ್ದರು. ಜನರೇ ಇಲ್ಲದ ಪಾಳುಬಿದ್ದ ಅರಮನೆ. ಹೀಗೆ ಒಳಗೆ ಹೊಕ್ಕು ಅನೇಕ ಕೊಠಡಿಗಳನ್ನು ದಾಟಿಕೊಂಡು ಹೋಗಿ ಕೊನೆಗೆ ಕಟ್ಟಕಡೆಯ ಕೋಣೆಯಲ್ಲಿ ಬಾಪೂ ಅವರನ್ನು ಕಂಡರು. ಆಗಾಖಾನ್ ಅರಮನೆಯನ್ನು ಸೇರಿದರು. ಅವರ ಅಂತ್ಯವೂ ಅಲ್ಲೇ ಆಯಿತು. ಗಾಂಧೀಜಿ ಅವರನ್ನು ಕರೆಸಿಕೊಂಡು ಅವರ ತೊಡೆಯ ಮೇಲೆ ತಲೆಯನ್ನಿಟ್ಟುಕೊಂಡು 22ನೇ ಫೆಬ್ರವರಿ 1944 ರಂದು 75ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು. ಪ್ರತಿವರ್ಷ ಫೆಬ್ರವರಿ 22ನೇ ದಿನಾಂಕವನ್ನು ರಾಷ್ಟ್ರಾದ್ಯಂತ "ಮಾತೃದಿವಸ" ಎಂದು ಆಚರಿಸಲಾಗುತ್ತಿದೆ. ಮಾನವ ಕೋಟಿಗೇ ಬೇಕಾಗಿದ್ದ ಬಾಪು ಅವರಿಗೆ ಒಂದು ಕ್ಷಣ ಅನಾಥವಾದ ಅನುಭವವಾಗಿತ್ತು.

ಮಾರನೆಯ ದಿನ 'ಬಾ' ಅವರ ಅಂತ್ಯಕ್ರಿಯೆ ಅದೇ ಆಗಾಖಾನ್ ಮಹಲ್‌ನ ಆವರಣದಲ್ಲಿ ನೆರವೇರಿತು. ಇಡೀ ಭಾರತ ದೇಶವೇ ಶೋಕ ಸಾಗರದಲ್ಲಿ ಮುಳುಗಿತು.

ಕಸ್ತೂರ್‌ಬಾ ಅವರು ತಮ್ಮ ದಾಂಪತ್ಯ ಜೀವನದ ನೌಕೆಯನ್ನು ಒಡೆಯದಂತೆ ಬಹು ಜಾಗರೂಕತೆಯಿಂದ ತಾಳ್ಮೆಯಿಂದ, ಜಾಣ್ಮೆಯಿಂದ ನಡೆಸಿಕೊಂಡು ಬಂದಿದ್ದರು. ಎಷ್ಟೋ ಸಲ ತನ್ನ ಪತಿ ಮಾಡುತ್ತಿರುವುದು ಸರಿಯಲ್ಲ ಎನಿಸಿದರೂ ಎದುರು ನಿಂತು ವಾದಿಸಿದವರಲ್ಲ, ಹಠ ಮಾಡಿದವರಲ್ಲ, ಹಿಂತಿರುಗಿಸಿ ಜವಾಬು ಕೊಟ್ಟವರಲ್ಲ. ಆದರೆ ತಾಳ್ಮೆಯಿಂದಲೇ ಬುದ್ಧಿ ಕಲಿಸಿದ್ದುಂಟು, ವಿವೇಕವನ್ನು ಬೋಧಿಸಿದ್ದುಂಟು. "ಬಾ ನನಗೆ ಅಹಿಂಸೆಯ ಗುರು" ಎಂದು ಸ್ವತ: ಗಾಂಧೀಜಿ ಅವರೇ ಹೇಳಿಕೊಂಡಿದ್ದಾರೆ. ಗಾಂಧೀಜಿ ಅವರ ನಿಸ್ಸಂಕೋಚ ವರ್ತನೆಯಿಂದ, ಕಟು ಮಾತುಗಳಿಂದ ಕಡೆದ ದಿವ್ಯಮೂರ್ತಿಯೇ ಕಸ್ತೂರ್‌ಬಾ. ಆಕೆ ಮಾತೆಯೂ ಹೌದು. ಕಸ್ತೂರಿಯೂ ಹೌದು. ಆದ್ದರಿಂದಲೇ ಆಕೆಯ ವ್ಯಕ್ತಿತ್ವದ ಪರಿಮಳವನ್ನು ಮುಚ್ಚಿಡಲು ಸಾಧ್ಯವೇ ಇಲ್ಲ.

ಆದರ್ಶ ಮಹಿಳೆ

'ಬಾ' ಸದ್‌ಗೃಹಿಣಿ. ಕೇವಲ ತನ್ನ ಮಕ್ಕಳಿಗೇ ಅಲ್ಲದೆ ಇಡೀ ಆಶ್ರಮವಾಸಿಗಳಿಗೆ ಮಾತೆಯಾಗಿ, ಪತಿಗೆ ಆದರ್ಶ ಸತಿಯಾಗಿ, ತನ್ನ ಕರ್ತವ್ಯಕ್ಕೆ ಚ್ಯುತಿ ಬರದಂತೆ ನಡೆದುಕೊಂಡರು. ಜೊತೆಗೆ ರಾಜಕೀಯ ರಂಗಕ್ಕೂ ಇಳಿದು ದೇಶ ಸೇವೆ ಮಾಡಿದ ಮಹಾನ್ ಮಹಿಳೆ ಕಸ್ತೂರ್‌ಬಾ.

ಕಸ್ತೂರ್‌ಬಾ ನಿಧನರಾದ ಮೇಲೆ ಆಕೆಯ ಹೆಸರಿನಲ್ಲಿ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ನಿಧಿ ಸಂಗ್ರಹಣೆ ಮಾಡಿ

'ಕಸ್ತೂರ್‌ಬಾ ಗಾಂಧಿ ಪ್ರತಿಷ್ಠಾನ'ವನ್ನು ಪ್ರಾರಂಭಿಸಲಾಯಿತು. ಈ ನಿಧಿ ಸಂಗ್ರಹಣಾ ಕಾರ್ಯದಲ್ಲಿ ಅಮೃತಲಾಲ್ ಥಕ್ಕರ್ ಅವರ ಸೇವೆ ಗಣನೀಯವಾದದ್ದು. ಥಕ್ಕರ್ 'ಬಾಪಾ' ಎಂದೇ ಹೆಸರುವಾಸಿಯಾಗಿದ್ದರು. ಗಾಂಧೀಜಿ ಅವರು ಇವರನ್ನು 'ಪುಟ್ಟ ಮಹಾತ್ಮ' ಎಂದು ಕರೆಯುತ್ತಿದ್ದುದುಂಟು.

ಕಸ್ತೂರ್‌ಬಾ ಗಾಂಧಿ ಸ್ಮಾರಕ ಟ್ರಸ್ಟ್‌ನ ಸ್ಥಾಪನೆ

'ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್' ಅನ್ನು ರಾಷ್ಟ್ರಮಟ್ಟದಲ್ಲಿ ಸ್ಥಾಪನೆ ಮಾಡಲಾಯಿತು. ಸ್ವತ: ಗಾಂಧೀಜಿ ಅವರೇ ಟ್ರಸ್ಟ್‌ನ ಪ್ರಥಮ ಅಧ್ಯಕ್ಷರಾದರು. ಥಕ್ಕರ್ ಬಾಪಾ ಅವರು ಪ್ರಧಾನ ಕಾರ್ಯದರ್ಶಿಯಾಗಿ, ಸುಚೇತ ಕೃಪಲಾನಿ ಅವರು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಗಾಂಧೀಜಿ ಅವರ ಸೇವಾಗ್ರಾಮದಲ್ಲೇ ಹಲವು ಕಾಲ ನೆಲಸಿದ್ದ ಎಚ್.ಸಿ. ದಾಸಪ್ಪ ಹಾಗೂ ಯಶೋಧರಾ ದಾಸಪ್ಪ ದಂಪತಿಗಳಿಗೆ ಮತ್ತೆ ಸೇವೆ ಮಾಡುವ ಅವಕಾಶ ದೊರೆಯಿತು.

ಕರ್ನಾಟಕದಲ್ಲಿ ಕಸ್ತೂರ್‌ಬಾ ಆಶ್ರಮ

'ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್' ಮೈಸೂರು ಶಾಖೆಯ ಪ್ರತಿನಿಧಿಯಾಗಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಗಾಂಧೀಜಿ ಅವರಿಂದ ನೇಮಕಗೊಂಡರು. ಗಾಂಧೀಜಿ ಅವರ ರಚನಾತ್ಮಕ ಕಾರ್ಯಗಳನ್ನು ಕೈಗೊಂಡು, ಕೊನೆಯವರೆಗೂ ಗ್ರಾಮೀಣ ಮಹಿಳೆಯರ, ಮಕ್ಕಳ, ಏಳಿಗೆಗಾಗಿ ಪರಿಶ್ರಮಿಸಿದರು. ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ನಿಸ್ವಾರ್ಥ ಸೇವೆಯನ್ನು ನೋಡಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಯಶೋಧರಮ್ಮನವರನ್ನು 'ಕರ್ನಾಟಕದ ಕಸ್ತೂರ್‌ಬಾ' ಎಂದು ಕರೆದಿದ್ದಾರೆ. ಅವರು ಕರ್ನಾಟಕದಲ್ಲಿ 22 ಕೇಂದ್ರಗಳನ್ನು ತೆರೆದರು. ಯಶೋಧರಮ್ಮ ಅವರು ಕೊನೆಯವರೆಗೆ ಅರಸೀಕೆರೆಯಲ್ಲಿರುವ 'ಕಸ್ತೂರ್‌ಬಾ ಗಾಂಧಿ ಟ್ರಸ್ಟ್'ಗೆ ಸೇವೆ ಸಲ್ಲಿಸಿ ಅಲ್ಲಿಯೇ ಸಮಾಧಿಯಾದರು. ಅವರ ತನು, ಮನ, ಧನವನ್ನು ಕಸ್ತೂರ್‌ಬಾ ಟ್ರಸ್ಟ್ ಮೂಲಕ ಸಾಮಾಜಿಕ ಸೇವೆಗೇ (ಗಾಂಧೀಜಿ ದಂಪತಿಗಳಿಗೆ) ಧಾರೆ ಎರೆದರು.

ಭಾವಚಿತ್ರಗಳಲ್ಲಿ ಕಸ್ತೂರ್‌ಬಾ



ಮೋಹನದಾಸ ಕರಮಚಂದ ಗಾಂಧಿ ಮತ್ತು ಕಸ್ತೂರ್ ಬಾ



ದಕ್ಷಿಣ ಆಫ್ರಿಕಾದಲ್ಲಿ ಮಹಾತ್ಮ ಗಾಂಧಿ ಮತ್ತು ಕಸ್ತೂರ್ ಬಾ (1913)



ಮಹಾತ್ಮ ಗಾಂಧಿ ಅವರೊಂದಿಗೆ ಕಸ್ತೂರಬಾ (1915)



ಕುಟುಂಬದ ಸದಸ್ಯರೊಂದಿಗೆ ಕಸ್ತೂರಬಾ



ಕಸ್ತೂರ್ ಬಾ ತಮ್ಮ ನಾಲ್ಕು ಮಕ್ಕಳೊಂದಿಗೆ



ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದಾಗ ಮಹಾತ್ಮ ಗಾಂಧಿ



ಮಹಾತ್ಮ ಗಾಂಧೀಜಿ ಅವರು ಸಬರಮತಿ ಆಶ್ರಮ (17.06.1917)



ಮಕ್ಕಳೊಂದಿಗೆ ಮಹಾತ್ಮ ಗಾಂಧಿ ಮತ್ತು ಕಸ್ತೂರಬಾ



ಸೇವಾಗ್ರಾಮದಲ್ಲಿ ಜಪಾನಿನ ಬೌದ್ಧ ಸಂನ್ಯಾಸಿಗಳ ಜೊತೆ ಕಸ್ತೂರ್‌ಬಾ, ಮೀರಾ ಬೆನ್ ಮತ್ತು ಮೊಮ್ಮಗ ಕಹನ್‌ದಾಸ್ (1938)




ನೂಲು ನೇಯುವುದರಲ್ಲಿ ತಲ್ಲೀನ



ಸೇವಾಗ್ರಾಮದಲ್ಲಿ ಕಸ್ತೂರ್‌ಬಾ ಮತ್ತು ಮಹಾತ್ಮ ಗಾಂಧಿ



ಆಶ್ರಮವಾಸಿಗಳೊಂದಿಗೆ ಕಸ್ತೂರ್‌ಬಾ ಮತ್ತು ಮಹಾತ್ಮ ಗಾಂಧಿ



ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬಾಪು ದಂಪತಿಗಳು (8.8.1942)



ದಲಿತ ಮಹಿಳೆಯೊಂದಿಗೆ ಕ್ರೈಸ್ತ ಯುವಕನ ಮದುವೆ.
ಮಹಾತ್ಮ ಗಾಂಧಿ – ಕಸ್ತೂರಬಾ ಗಾಂಧಿ, ಸೇವಾಗ್ರಾಮ (1940)



ಸೇವಾಗ್ರಾಮದ ಸದಸ್ಯರೊಂದಿಗೆ ಮಹಾತ್ಮ ಗಾಂಧಿ – ಕಸ್ತೂರಬಾ



ಮಹಾತ್ಮ ಗಾಂಧಿ ಸೇವೆಯಲ್ಲಿ ಕಸ್ತೂರಬಾ



ಮಹಾತ್ಮ ಗಾಂಧಿ ಅವರೊಂದಿಗೆ ಕಸ್ತೂರಬಾ



ಸರ್ದಾರ್ ಪಟೇಲ್ ಅವರೊಂದಿಗೆ
ಮಹಾತ್ಮ ಗಾಂಧಿ ಮತ್ತು ಕಸ್ತೂರ್‌ಬಾ



ನೇತಾಜಿ ಸುಭಾಷ್‌ಚಂದ್ರ ಬೋಸ್. ಮಹಾತ್ಮ ಗಾಂಧಿ
ಅವರೊಂದಿಗೆ ಕಸ್ತೂರಬಾ (1938)



ಮಹಾತ್ಮ ಗಾಂಧಿ – ಕಸ್ತೂರಬಾ ಶಾಂತಿ ನಿಕೇತನಕ್ಕೆ ಭೇಟಿ (1940)



ರವೀಂದ್ರನಾಥ ಠ್ಯಾಗೂರ್ ಅವರೊಂದಿಗೆ
ಕಸ್ತೂರ್‌ಬಾ ಮತ್ತು ಮಹಾತ್ಮ ಗಾಂಧಿ – 1940



ಕಸ್ತೂರ್‌ಬಾ ನಿಧನದ ವೇಳೆ ಶೋಕತಪ್ತ ಗಾಂಧಿ (22.4.1944)



ಕಸ್ತೂರ್‌ಬಾ ಅವರನ್ನು ಬಂಧಿಯಾಗಿರಿಸಿದ್ದ ಅಗಾಖಾನ್ ಅರಮನೆ



ಕಸ್ತೂರ್‌ಬಾ ಮತ್ತು ಮಹದೇವ ದೇಸಾಯಿ ಅವರ ಸಮಾಧಿಸ್ಥಳ
ಅಗಾಖಾನ್ ಅರಮನೆ



ಕಸ್ತೂರ್‌ಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಕೇಂದ್ರ ಕಚೇರಿ, ಕಸ್ತೂರ್‌ಬಾ ಗ್ರಾಮ, ಇಂದೋರ್



ಕಸ್ತೂರ್‌ಬಾ ಆಶ್ರಮ, ಅರಸೀಕೆರೆ, ಹಾಸನ



ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಅರಸೀಕೆರೆಯ
ಕಸ್ತೂರ್‌ಬಾ ಆಶ್ರಮದ ಸ್ವಯಂ ಸೇವಕಿಯರೊಂದಿಗೆ,
ಕಸ್ತೂರ್‌ಬಾ ಆಶ್ರಮ, ಅರಸೀಕೆರೆ, ಹಾಸನ



ಲೇಖಕಿಯ ಕಿರು ಪರಿಚಯ

ಹೆಸರು : ಲೀಲ ವಾಸುದೇವ್

ಶಿಕ್ಷಣ : ಎಂ.ಎ, ಬಿ.ಇಡಿ.

ವೃತ್ತಿ : ನಿವೃತ್ತ ಪ್ರಾಂಶುಪಾಲರು

ವಯಸ್ಸು : 73 ವರ್ಷ

ಸಂಪರ್ಕ : ಮೊ. : 9972227346

ಆಸಕ್ತಿ :
- ತಂಜಾವೂರು ಶೈಲಿಯ ಚಿತ್ರ ರಚನೆ

ಪ್ರಕಟಣೆ :
- ಕನ್ನಡಪ್ರಭ ಪತ್ರಿಕೆಯ 'ಧರ್ಮ ಜ್ಯೋತಿ' ಬರಹದ ಕಿರುಹೊತ್ತಿಗೆ
- ಹವ್ಯಾಸಿ ಕವಯಿತ್ರಿ 'ಅಂಶುಮಾಲಿ' ಅಂಕಿತನಾಮ, 'ಭಾವನ ಬಿಂದು' ಪ್ರಕಟಿತ ಕವನ ಸಂಕಲನ
- 'ಮಕ್ಕಳ ಕಸ್ತೂರ ಬಾ' ಕಿರುಹೊತ್ತಿಗೆ

ಕಾರ್ಯಕ್ಷೇತ್ರ :
- ಕಾರ್ಯಕಾರಿ ಸಮಿತಿ ಸದಸ್ಯೆ, ದ ಬೆಂಗಳೂರು ಎಜುಕೇಶನ್ ಸೊಸೈಟಿ ವಿದ್ಯಾಸಂಸ್ಥೆ, ಮಲ್ಲೇಶ್ವರಂ
- ಟ್ರಸ್ಟಿ, ಗಾಂಧೀ ಸಾಹಿತ್ಯ ಸಂಘ, ಮಲ್ಲೇಶ್ವರಂ
- ನಿರ್ದೇಶಕರು, ಶ್ರೀ ರಾಮ ಕೋ-ಆಪರೇಟಿವ್ ಬ್ಯಾಂಕ್, ಮಲ್ಲೇಶ್ವರಂ
- ಟ್ರಸ್ಟಿ, ಸಿದ್ದವನಹಳ್ಳಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್ ಮಲ್ಲೇಶ್ವರಂ
- ಅಜೀವ ಸದಸ್ಯರು, ಆಶ್ವಾಸನ್, ಚುಟುಕು ಸಾಹಿತ್ಯ – ಕೌಸ್ತುಭ ಮತ್ತು ಎಂ.ಇ.ಡಬ್ಲ್ಯು.ಎಸ್., ಮಲ್ಲೇಶ್ವರಂ

ಗ್ರಂಥ ಋಣ

1. ಜ್ಞಾನ ಗಂಗೋತ್ರಿ
2. "ಕಸ್ತೂರ್‌ಬಾ", ಶ್ರೀಮತಿ ಬಿ.ಕಾಮಾಕ್ಷಮ್ಮ
3. ನಮ್ಮ ಬಿ.ಇ.ಎಸ್. ಶಾಲೆಯ ವತಿಯಿಂದ ಪ್ರತಿ ವರ್ಷವೂ ಗಾಂಧಿ ಜಯಂತಿಯ ಅಂಗವಾಗಿ ಗಾಂಧಿ ಸಾಹಿತ್ಯ ಸಂಘದಲ್ಲಿ ನಮ್ಮ ಶಾಲಾ ಮಕ್ಕಳಿಂದ ಒಂದು ದಿನದ ಕಾರ್ಯಕ್ರಮವನ್ನು ನಡೆಸಿಕೊಡುತ್ತೇವೆ. ಇದರಲ್ಲಿ ಒಂದು ನಾಟಕ ಕಸ್ತೂರ್‌ಬಾ ಅಥವಾ ಗಾಂಧೀಜಿಯವರ ಬಗ್ಗೆ ಇರುತ್ತದೆ. ಇದಲ್ಲದೆ ಬಾಪೂ ಅವರ ಮೇಲೆ ಹಾಡುಗಳನ್ನು ಹಾಡುವರು. ಗಾಂಧೀಜಿಯವರ ಪ್ರಾಣವಾದ ಭಗವದ್ಗೀತೆಯ ಎರಡನೆ ಅಧ್ಯಾಯದ ಪ್ರಾರ್ಥನಾ ಶ್ಲೋಕಗಳನ್ನು ಪಠಿಸುವರು. ಕೊನೆಯಲ್ಲಿ ರಘುಪತಿ ರಾಘವ ಭಜನೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಗುತ್ತದೆ. ಪ್ರತಿ ವರ್ಷ ಶಾಲಾ ಶಿಕ್ಷಕಿಯರು ನಡೆಸುವ ಕಾರ್ಯಕ್ರಮ ಇದಾಗಿದೆ.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1883
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ ಬೊಂಬಾಯಿ, ರಾಜ್‌ಕೋಟೆಯಲ್ಲಿ ವಕೀಲಿ ವೃತ್ತಿ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899 ಮತ್ತು 1906
ಭಾರತಕ್ಕೆ ವಾಪಸ್ಸು	1901
ಭಾರತದಲ್ಲಿ ವ್ಯಾಪಕವಾದ ಪ್ರವಾಸ, ಕಲ್ಕತ್ತದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಪಾಲ್ಗೊಂಡಿದ್ದು, ಬೊಂಬಾಯಿಲ್ಲಿ ಲಾಯರ್ ಆಫೀಸ್ ಪ್ರಾರಂಭ	1901
ಭಾರತೀಯರ ಕೋರಿಕೆಯಂತೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ	1902
ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್	1903
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1904
ಫೀನಿಕ್ಸ್ ಆಶ್ರಮ ಸ್ಥಾಪನೆ	1904

ಸೆಪ್ಟಂಬ ವೀರಾಗಾಂನಲ್ಲಿ ಸಮುದ್ರ
ಪ್ರಯಾಣಿಕರ ಶೋಷಣೆಯ ವಿರುದ್ಧ
ಸತ್ಯಾಗ್ರಹ ಮಾಡುವ ಬೆದರಿಕೆ 1905
ಟ್ರಾನ್ಸ್‌ವಾಲ್‌ನ ಭಾರತೀಯ ವಲಸೆಗಾರರ
ಮೇಲೆ ಪ್ರಯೋಗಿಸಲಾಗುವ "ಏಸಿಯಾಟಿಕ್
ಆರ್ಡಿನೆನ್ಸ್ ವಿರುದ್ಧ ಚಳುವಳಿ 1906
ಬ್ರಹ್ಮಚರ್ಯ ವ್ರತ ಸ್ವೀಕಾರ 1906
ಇಂಗ್ಲೆಂಡಿಗೆ ಪ್ರಯಾಣ 1906
ಜೂನ್, ಸತ್ಯಾಗ್ರಹ ಏಷಿಯನ್ನರ ಬಲತ್ಕಾರದ
ನೋಂದಾವಣೆ (ಕರಾಳ ಕಾನೂನು) ವಿರುದ್ಧ
ಸತ್ಯಾಗ್ರಹ 1907
ಸತ್ಯಾಗ್ರಹ ನಡೆಸಿದ್ದಕ್ಕೆ ದಕ್ಷಿಣ ಆಫ್ರಿಕಾದ
ಜೋಹಾನ್ಸ್‌ಬರ್ಗ್‌ನಲ್ಲಿ ಪ್ರಥಮ ಜೈಲುವಾಸ 1908
ಇಂಗ್ಲೆಂಡಿಗೆ ಪ್ರಯಾಣ, ಭಾರತೀಯ
ವಲಸೆಗಾರರ ಪರವಾದಗಳು, ಸ್ತ್ರೀ ಸ್ವಾತಂತ್ರ್ಯ
ಹೋರಾಟ ಪರಿಶೀಲನೆ 1909
ಮೇ ಜೋಹಾನ್ಸ್‌ಬರ್ಗ್‌ನಲ್ಲಿ ಟಾಲ್‌ಸ್ಟಾಯ್
ಫಾರ್ಮ್ ಸ್ಥಾಪನೆ 1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ 1913
ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮನ 1914
ಮೇ ಅಹಮದಾಬಾದ್ ಬಳಿ ಸತ್ಯಾಗ್ರಹ
ಆಶ್ರಮ ಸ್ಥಾಪನೆ 1915
ಸಬರಮತಿ ಆಶ್ರಮ ಸ್ಥಾಪನೆ 1917
ಫೆಬ್ರವರಿ ಅಹಮದಾಬಾದ್ ಮಿಲ್
ಕೂಲಿಗಾರರ ಪರ ಹೋರಾಟ, ಮೂರು ದಿನ
ಉಪವಾಸ ಸತ್ಯಾಗ್ರಹ, ಭರತದಲ್ಲಿ ಇದೇ
ಮೊದಲ ಉಪವಾಸ

ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	
ವಿರೋಧಿಸಿ ಏಪ್ರಿಲ್ 13-14ರಂದು ಉಪವಾಸ	1919
ಯಂಗ್ ಇಂಡಿಯಾ ಮತ್ತು	
ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಚಳುವಳಿ, ಖಿಲಾಫತ್ ಚಳುವಳಿ	
ಅಖಿಲ ಭಾರತ ಹೋಂರೂಲ್ ಲೀಗ್ ಅಧ್ಯಕ್ಷತೆ	
1920	
ಖಾದಿಯ ಪಂಚೆ ಉಡುವ ನಿರ್ಧಾರ ಮತ್ತು	
ಖಾದಿ ಪ್ರಚಾರ ಆರಂಭ	1921
ಚೌರಿಚೌರಾ ಹತ್ಯಾಕಾಂಡ, ಅಸಹಕಾರ ಸತ್ಯಾಗ್ರಹ	
ನಿಲುಗಡೆ, ಬಾರ್ದೋಲಿಯಲ್ಲಿ ಐದು ದಿನದ	
ಉಪವಾಸ, ಯಂಗ್ ಇಂಡಿಯಾ	
ಲೇಖನಗಳಿಗಾಗಿ ರಾಜದ್ರೋಹದ ಆಪಾದನೆ	
ಮೇಲೆ ದಸ್ತಗಿರಿ ಭಾರತದಲ್ಲಿ ಪ್ರಥಮ ಜೈಲುವಾಸ	1922
ಫೆಬ್ರವರಿ ಯರವಾಡಾ ಜೈಲಿನಿಂದ ಬಿಡುಗಡೆ	1924
ಹಿಂದೂ ಮುಸ್ಲಿಂ ಏಕತೆಗಾಗಿ 21 ದಿನ ಉಪವಾಸ	1924
ಬೆಳಗಾವಿ ಕಾಂಗ್ರೆಸ್ ಅಧಿವೇಶನ	1924
ಚರಖಾ ಸಂಘದ ಸ್ಥಾಪನೆ	1925
ಬಾರ್ದೋಲಿ ಸತ್ಯಾಗ್ರಹ ಅನ್ಯಾಯದ ತೆರಿಗೆ ವಿರುದ್ಧ	1928
ಮೂರನೇ ಅಖಿಲ ಭಾರತ ಸತ್ಯಾಗ್ರಹ	
ಜನವರಿ 26 ರಾಷ್ಟ್ರದಿನವೆಂದು ಸೂಚನೆ	
ಉಪ್ಪಿನ ಸತ್ಯಾಗ್ರಹ ಮತ್ತು ದಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು	
ದುಂಡು ಮೇಜಿನ ಪರಿಷತ್ತು ವಿಫಲ	1931

ಹರಿಜನರಿಗೆ ಪ್ರತ್ಯೇಕ ಚುನಾವಣೆಗಳನ್ನು	
ಏರ್ಪಡಿಸುವ ಬ್ರಿಟಿಷ್ ಯೋಜನೆಗಳನ್ನು	
ವಿರೋಧಿಸಿ ಉಪವಾಸ ಸತ್ಯಾಗ್ರಹ	
ಹರಿಜನ ವಾರ ಪತ್ರಿಕೆ ಆರಂಭ	
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ, ಮೂರು ಸಲ	
ಗಾಂಧೀಜಿಯ ಕೊಲೆಯ ಪ್ರಯತ್ನಗಳು	
ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಆರಂಭ	1934
ವಾರ್ಧಾ ಸಮೀಪ ಸೇವಾಗ್ರಾಮ ಆಶ್ರಮ ಆರಂಭ	1936
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
21 ದಿನಗಳ ಉಪವಾಸ ಸತ್ಯಾಗ್ರಹ ಆರಂಭ	1943
ಫೆ. 22 ಕಸ್ತೂರಬಾ ಮರಣ, 23ರಂದು	
ಆಗಾಖಾನ್ ಅರಮನೆ ಆವರಣದಲ್ಲಿ ದಹನ	1944
ಕೊನೆಯ ಬಾರಿಗೆ ಆಗಾಖಾನ್	
ಅರಮನೆಯಲ್ಲಿ ಸೆರೆವಾಸ	
ಕ್ಯಾಬಿನೆಟ್ ಮಿಷನ್, ಸಿಮ್ಲಾ ಸಮ್ಮೇಳನ	1945
ಕ್ಯಾಬಿನೆಟ್ ಅಂಗೀಕಾರ, ನೌಖಾಲಿ ಶಾಂತಿ	
ಪಾದಯಾತ್ರೆ	1946
ಭಾರತಕ್ಕೆ ಸ್ವಾತಂತ್ರ್ಯ ಮತ್ತು ದೇಶ ವಿಭಜನೆ	1947
ದೆಹಲಿಯಲ್ಲಿ ಕೋಮುವಾರು ಸೌಹಾರ್ದಕ್ಕಾಗಿ	
ಕೊನೆಯ ಉಪವಾಸ	1948
ಹಂತಕನ ಗುಂಡೇಟಿಗೆ ಹುತಾತ್ಮರು	30–1–1948
ರಾಜ್‌ಘಾಟದಲ್ಲಿ ದಹನ	31–1–1948

ಕಸ್ತೂರ್‌ಬಾ ಅವರ ಕಿರು ಜೀವನ ಚಿತ್ರಣ

ಪೋರಬಂದರದಲ್ಲಿ ಜನನ	11.04.1869
ಗಾಂಧಿ ಅವರೊಡನೆ ವಿವಾಹ	1888
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1896
ಗಾಂಧಿ ಅವರ ಮೇಲೆ ಆಕ್ರಮಣ ಖಂಡನೆ	1897
ಜೋಹನ್ಸ್‌ಬರ್ಗ್‌ನಲ್ಲಿ ಪ್ಲೇಗ್ ಪೀಡಿತರ ಸೇವೆ	1904
ಜೋಹನ್ಸ್‌ಬರ್ಗ್‌ನಲ್ಲಿ ಭಾರತೀಯ ಮಹಿಳೆಯರಿಗೆ ಸಂದೇಶ	1909
ಗುಜರಾತಿನ ಕೊಚರಬಾದಲ್ಲಿ ಆಶ್ರಮ ಸ್ಥಾಪನೆ	1915
ಗಾಂಧೀಜಿ ಅವರೊಡನೆ ಭಾರತದಾದ್ಯಂತ ಪ್ರವಾಸ	1916
ಗಾಂಧೀಜಿ ಅವರೊಡನೆ ಚಂಪಾರಣ್ಯ ಚಳುವಳಿಯಲ್ಲಿ ಭಾಗಿ	1917
ಸಬರಮತಿ ಆಶ್ರಮದ ನಿರ್ವಹಣೆಯ ಜವಾಬ್ದಾರಿ	1920
ಗಾಂಧೀಜಿ ಅವರೊಡನೆ ವಿದೇಶಿ ವಸ್ತ್ರಗಳ ನಾಶ	1921
ವಿದೇಶಿ ವಸ್ತ್ರ ಬಹಿಷ್ಕಾರ ಮತ್ತು ನೂಲು ನೇಯಲು ಕಲಿಕೆ	1922
ಅಸಹಕಾರ ಚಳುವಳಿಯಲ್ಲಿ ಭಾಗಿ	1930
ಭಾರತೀಯ ಮಹಿಳೆಯರಿಂದ ಚಳುವಳಿಗಾಗಿ ಕಸ್ತೂರ್‌ಬಾಗೆ ನೆರವು	1931
ಅಸಹಕಾರ ಚಳುವಳಿಗಾಗಿ 6 ವಾರಗಳ ಸೆರೆಮನೆ ವಾಸ	1932
ಬ್ರಿಟಿಷರಿಂದ ಬಂಧನ ಮತ್ತೆ ಸೆರೆವಾಸ	1933
ಸಬರಮತಿ ಆಶ್ರಮ ಮುತ್ತಿಗೆ	1933
ಗಾಂಧಿಯವರೊಡನೆ ಪೂನಾದ ಮುನಿಸಿಪಲ್ ಹಾಲ್‌ಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ	

ನಾಡಬಾಂಬ್ ಎಸೆತಕ್ಕೆ ಗುರಿ	1934
ಸೇವಾಗ್ರಾಮ ಆಶ್ರಮ ಸ್ಥಾಪನೆ	1936
ರಾಜ್‌ಕೋಟ್‌ನಲ್ಲಿ ಠಾಕೂರರ ದಬ್ಬಾಳಿಕೆ ವಿರುದ್ಧ ಮಹಿಳಾ ಹೋರಾಟಗಾರರಿಗೆ ನೆರವು	1939
ಬಂಧನ, ಕತ್ತಲ ಸೆರೆಮನೆವಾಸ	1939
ಕಸ್ತೂರ್‌ಬಾ ಕುರಿತು ಹರಿಜನ ಪತ್ರಿಕೆಯಲ್ಲಿ ಗಾಂಧೀಜಿ ಅವರ ಲೇಖನ ಪ್ರಕಟ	1939
ಕಾಂಗ್ರೇಸ್ ಅಧಿವೇಶನಕ್ಕೆ ಗಾಂಧೀಜಿ ಅವರೊಡನೆ ಮುಂಬೈಗೆ ಪಯಣ	1942
ಶಿವಾಜಿ ಪಾರ್ಕ್‌ನಲ್ಲಿ ಬೃಹತ್ ಸಾರ್ವಜನಿಕ ಸಮಾವೇಶದಲ್ಲಿ ಮಾಡಿದ ಭಾಷಣಕ್ಕಾಗಿ ಬಂಧನ	1942
ಸೆರೆಮನೆಯಲ್ಲಿ 2 ಬಾರಿ ಹೃದಯಾಘಾತ	1944
ಸೆರೆಮನೆಯಲ್ಲಿ 74ನೇ ವಯಸ್ಸಿನಲ್ಲಿ ನಿಧನ	22.02.1944

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	40–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	22–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	63–00
24.	ಸ್ವಾತಂತ್ರ್ಯ	42–00
25.	ಅಸ್ಪೃಶ್ಯತೆ	45–00
26.	ಒಳ್ಳೆಯ ಜೀವನ	60–00
27.	ಗಾಂಧೀ ಮತ್ತು ಕರ್ನಾಟಕ	200–00
28.	ಸತ್ಯ	38–00

29.	ವಿದ್ಯಾರ್ಥಿಗಳಿಗಾಗಿ	30-00
30.	ಸರ್ವೋದಯ	30-00
31.	ಖಾದಿ ಗ್ರಾಮೋದ್ಯೋಗ	58-00
32.	ನನ್ನ ಬಾಲ್ಯದ ನೆನಪುಗಳು	52-00
33.	ಗ್ರಾಮರಾಜ್ಯ ಆಡಳಿತ	5-00
34.	ನನ್ನ ಕನಸಿನ ಸ್ವರಾಜ್ಯ	42-00
35.	ಹಾಸ್ಯ ಮತ್ತು ಗಾಂಧೀ	44-00
36.	ನನ್ನ ಆದರ್ಶಗ್ರಾಮ	5-00
37.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ	48-00
38.	ಸತ್ಯಾಗ್ರಹಿ	40-00
39.	ಗ್ರಾಮದಾನ ಗ್ರಾಮ ಸ್ವರಾಜ್ಯ	25-00
40.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
41.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5-00
42.	ಸತ್ಯಾಗ್ರಹ	5-00
43.	ಹಿಂದ್ ಸ್ವರಾಜ್	5-00
44.	ಆರೋಗ್ಯ	5-00
45.	ಮಹಾತ್ಮ ಗಾಂಧಿ ಪ್ರಸ್ತುತತೆ	10-00
46.	ಬಹುರೂಪಿ ಗಾಂಧಿ	35-00
47.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30-00
48.	ಕೃತಯುಗಿ ವಿನೋಬಾ ಭಾವೆ	15-00
49.	ಮೋಹನ ತರಂಗ	40-00
50.	ನಮ್ಮ ಗಾಂಧಿ ತಾತ	22-00
51.	ಗೀತಾ ಪ್ರವಚನ	80-00
52.	ಜೆ.ಪಿ. ಜೀವನ ಹಾದಿ	45-00
53.	ಗಣ್ಯರು ಕಂಡಂತೆ ಗಾಂಧಿ	20.0
54.	ಗೀತಾಮಾತೆ	80.00
55.	ಲೋಕ ಚಿಂತಕರು	145.00
56.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00

57.	ಮಹದೇವ ದೇಸಾಯಿ	63.00
58.	ಸಮಾಜವಾದ : ಗಾಂಧೀ ದೃಷ್ಟಿಕೋನ	15.00
59.	ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00
60.	ಗಾಂಧೀ ಬಳಗದ ವಿದೇಶಿಯರು	89.00
61.	ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ	33.00
62.	ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ	80.00
63.	ಹುಕ್ಕೇರಿಕರ ರಾಮರಾಯರು	110.00
64.	ಮಹಿಳೆಯರು	63.00
65.	ನನ್ನ ಬಾಲ್ಯದ ನೆನಪುಗಳು	52.00
66.	ನಯೀ ತಾಲೀಂ	58.00
67.	ಚರಕ ಸಂಹಿತೆ	68.00
68.	ಸ್ವಚ್ಛ ಭಾರತಿ	82.00
69.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	66.00
70.	ಗಾಂಧಿಯೊಳಗಿನ ಪತ್ರಕರ್ತ ಮರು ವೀಕ್ಷಣೆ	68.00
71.	ಅಂದಿಗೂ-ಇಂದಿಗೂ ಪ್ರಸ್ತುತ ಗಾಂಧೀಜಿ	94.00
72.	ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ	92.00
73.	ಆಧ್ಯಾತ್ಮಿಕ ಸುಸ್ಥಿರತೆ	72.00
74.	Nayi Talim	58.00
75.	Temple & Mosque	10-00
76.	Rastrapita Mahatma Gandhi	25-00
77.	Swarajya of My Dreams	5-00
78.	Gandhi My Grand Father	5-00
79.	Grand Pa Gandhi	5-00
80.	Relevance of Gandhi	20-00
81.	Vinoba Sage of the Age	20.00
82.	Kasturba	33.00
83.	Mahatma Gandhi and his Foreign Associates	87.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
● ಬಿಜಾಪುರ (ವಿಜಯಪುರ)	ದಿ. 05-05-1918 ರಿಂದ ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09-11-1920
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-09-1921
● ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927 ರಿಂದ ದಿ. 23-02-1927 ರವರೆಗೆ
● ನಿಪ್ಪಾಣಿ	ದಿ. 27-03-1927 ರಿಂದ ದಿ. 31-03-1927 ರವರೆಗೆ
● ಬೆಳಗಾವಿ	ದಿ. 01-04-1927 ದಿ. 18-04-1027 ರಿಂದ ದಿ. 19-04-1927ರವರೆಗೆ
● ಬೆಂಗಳೂರು	ದಿ. 06-06-1927 ರಿಂದ ದಿ. 13-07-1927 ರವರೆಗೆ
● ತುಮಕೂರು	ದಿ. 14-07-1927

● ತುಮಕೂರು, ಮಧುಗಿರಿ	ದಿ. 15-07-1927
● ತುಮಕೂರು	ದಿ. 16-07-1927
● ಬೆಂಗಳೂರು	ದಿ. 17-07-1927
● ಬೆಂಗಳೂರು	ದಿ. 18-07-1927
● ಮೈಸೂರು	ದಿ.19-07-1927 ರಿಂದ ದಿ. 21-07-1927 ರವರೆಗೆ
● ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 21-07-1927
● ಮೈಸೂರು	ದಿ. 23-07-1927
● ಬೆಂಗಳೂರು	ದಿ. 24-07-1927 ರಿಂದ ದಿ. 30-07-1927 ರವರೆಗೆ
● ಕ್ಲೋಸ್‌ಪೇಟೆ (ರಾಮನಗರ) ಕಾನಕಾನಹಳ್ಳಿ (ಕನಕಪುರ)	ದಿ. 31-07-1927
● ಬೆಂಗಳೂರು	ದಿ. 01-08-1927
● ಅರಸೀಕರೆ, ಹಾಸನ	ದಿ. 02-08-1927
● ಹಾಸನ	ದಿ. 03-08-1927
● ಹಾಸನ, ಹೊಳೆನರಸೀಪುರ	ದಿ. 04-08-1927
● ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ
● ದಾವಣಗೆರೆ	ದಿ. 12-08-1927
● ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927
● ಶಿವಮೊಗ್ಗ	ದಿ. 14-08-1927 ರಿಂದ ದಿ. 15-08-1927 ರವರೆಗೆ
● ಆಯ್ನನೂರು, ಕುಂಸಿ, ಸಾಗರ ಶಿವಮೊಗ್ಗ	ದಿ. 16-08-1927
● ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
● ಭದ್ರಾವತಿ, ತರೀಕೆರೆ ಬೀರೂರು, ಕಡೂರು	ದಿ. 18-08-1927
● ಚಿಕ್ಕಮಗಳೂರು	ದಿ. 19-08-1927

- ಬೇಲೂರು, ಹಳೇಬೀಡು ಅರಸೀಕೆರೆ — ದಿ. 20-08-1927
- ತಿಪಟೂರು — ದಿ. 21-08-1927
- ಬೆಂಗಳೂರು — ದಿ. 22-08-1927
- ಬೆಂಗಳೂರು — ದಿ. 23-08-1927
- ಹೊಸೂರು, ಸೂಳಗಿರಿ ಕೃಷ್ಣಗಿರಿ — ದಿ. 24-08-1927
- ಬೆಂಗಳೂರು — ದಿ. 25-08-1927 ರಿಂದ ದಿ. 30-08-1927 ರವರೆಗೆ
- ಹಿಂದೂಪುರ, ವಿಧುರಾಶ್ವತ್ಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು — ದಿ. 04-01-1934
- ತಗಡೂರು, ಬದನವಾಳ ನಂಜನಗೂಡು, ಮೈಸೂರು — ದಿ. 05-01-1934
- ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ — ದಿ. 06-01-1934
- ಬೆಂಗಳೂರು — ದಿ. 07-01-1934 ರಿಂದ ದಿ. 09-01-1934 ರವರೆಗೆ
- ಪೊನ್ನಂಪೇಟೆ, ಹುದಿಕೇರಿ — ದಿ. 22-02-1934
- ವಿರಾಜಪೇಟೆ, ಬೆಳ್ಳೂರು ಸೋಮವಾರ ಪೇಟೆ, ಗುಂಡುಕಟ್ಟೆ — ದಿ. 23-02-1934
- ಮಡಿಕೇರಿ, ಸಂಪಾಜೆ, ಸುಳ್ಯ ಪುತ್ತೂರು, ಉಪ್ಪಿನಂಗಡಿ ವಿಠಲಗಬ್ಬ, ಕಲ್ಲಡ್ಕ, ಪಾಣೆ ಮಂಗಳೂರು, ಬಂಟ್ವಾಳ, ಮಂಗಳೂರು — ದಿ. 24-02-1934
- ಮಂಗಳೂರು, ಗುರುಪುರ, ಬಜ್ಪೆ ಯಕ್ಕೂರು, ಕಟೀಲು, ಕಿನ್ನಗೋಳಿ ಮೂಲ್ಕಿ, ಪಡುಬಿದ್ರಿ, ಕಟಪಾಡಿ ಗುರುಪುರ, ಉದ್ಯಾವರ ಉಡುಪಿ, ಬ್ರಹ್ಮಾವರ, ಸಿದ್ದಾಪುರ — ದಿ. 25-02-1934

● ಕುಂದಾಪುರ	ದಿ. 26-02-1934
● ಕುಂದಾಪುರ, ಭಟ್ಕಳ ಹೊನ್ನಾವರ, ಕಾರವಾರ	ದಿ. 27-02-1934
● ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ	ದಿ. 28-02-1934
● ಶಿರಸಿ, ಸಿದ್ದಾಪುರ, ದಾಸನಕೊಪ್ಪ ಇಸಲೂರು, ಏಕಾಂಬಿ, ಆಲೂರು ಬ್ಯಾಡಗಿ, ಮೋಟೆಬೆನ್ನೂರು	ದಿ. 01-03-1934
● ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು	ದಿ. 02-03-1934
● ಸೊಂಡೂರು, ಬಳ್ಳಾರಿ, ಹೊಸಪೇಟೆ ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ	ದಿ. 03-03-1934
● ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ	ದಿ. 04-03-1934
● ಬೆಳಗಾವಿ	ದಿ. 05-03-1934
● ಬೆಳಗಾವಿ	ದಿ. 06-03-1934
● ಬೆಳಗಾವಿ, ಯಮಕನಮರಡಿ, ವಂಟಮರಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ	ದಿ. 07-03-1934
● ಶೆಡಬಾಳ, ಬನಹಟ್ಟಿ, ಅಥಣಿ ಬಿಜಾಪುರ (ವಿಜಯಪುರ), ತಿಕೋಟ, ತೊರವಿ ಇಳಕಲ್	ದಿ. 08-03-1934
● ನಂದಿ ಬೆಟ್ಟ	10-05-1936 ರಿಂದ 30-05-1936 ರವರೆಗೆ
● ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರ ಪೇಟೆ, ಕೆ.ಜಿ.ಎಫ್	31-05-1936
● ಬೆಂಗಳೂರು	01-06-1936 ರಿಂದ 12-06-1936 ರವರೆಗೆ
● ಬೆಳಗಾವಿ ಜಿಲ್ಲೆಯ ಹುದಲಿ	16-04-1937 ರಿಂದ 21-04-1937ರವರೆಗೆ

ಗಾಂಧಿ ಅವರ ನೀತಿ ಮಾರ್ಗ ಸೂಚಿ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿಗಳು	**Students**

ಪ್ರೊ. ಲೀಲಾ ವಾಸುದೇವ್ ಅವರು ಮೂಲತಃ ಬರಹಗಾರರು ಹಾಗೂ ನಿರಂತರ ಓದುಗರು, ಸುಮಾರು 33 ವರ್ಷಗಳು ವಿದ್ಯಾರ್ಥಿ - ವಿದ್ಯಾರ್ಥಿನಿಯರೊಂದಿಗೆ ಪಾಠ ಮಾಡುತ್ತ ಕಲಿಸಿದ್ದಕ್ಕಿಂತ, ಕಲಿತಿದ್ದೇ ಹೆಚ್ಚು ಎನ್ನುತ್ತಿರುತ್ತಾರೆ. ಇವರು ಗಾಂಧೀಜಿ ಮತ್ತು ಕಸ್ತೂರ್‌ಬಾ ಜೀವನ, ಆದರ್ಶ ಮತ್ತು ತತ್ವ ಸಿದ್ಧಾಂತಗಳಲ್ಲಿ ಕೆಲವನ್ನಾದರೂ ಪಾಲಿಸಲು ಸಾಧ್ಯವೇ ಎಂದು ಸದಾ ಪ್ರಯತ್ನಿಸುತ್ತಿರುತ್ತಾರೆ. ಸರಳತೆ, ಪರರಿಗೆ ನೋವುಂಟು ಮಾಡದ ಜೀವನ ವಿಧಾನ, ನಿರಂಹಕಾರ ಮತ್ತು ಶಿಸ್ತು ಇವರು ಅಳವಡಿಸಿಕೊಂಡ ಬದುಕಿನ ಕ್ರಮವಾಗಿದೆ. ಅದರಂತೆ ಅವರು ಗಾಂಧೀಜಿ ಮತ್ತು ಕಸ್ತೂರ್‌ಬಾ ಅವರನ್ನು ಓದಿಕೊಂಡಂತೆ, "ಮಹಾತ್ಮನೊಂದಿಗಿನ ಸಹಚರ್ಯದಲ್ಲಿ 'ಬಾ' ಅವರ ಪಾತ್ರ" ಕುರಿತಾಗಿ ಬರೆಯಲೇ ಬೇಕೆಂಬ ಒತ್ತಾಸೆಯಿಂದ ಈ ಕೃತಿ ಮೂಡಿ ಬಂದಿದೆ.

ನಾಡೋಜ ಡಾ. ವೂಡೇ ಪಿ. ಕೃಷ್ಣ

ಮಹಾತ್ಮಗಾಂಧಿ ಅವರ ಬಗ್ಗೆ ವಿಪುಲ ಸಾಹಿತ್ಯ ಲಭ್ಯವಿದೆ. ಆದರೆ ಅವರನ್ನು ರೂಪಿಸಿದವರಲ್ಲಿ ಪ್ರಮುಖರಾದ ಕಸ್ತೂರ್‌ಬಾ ಗಾಂಧಿ ಅವರ ಬಗ್ಗೆ ಹೆಚ್ಚು ಸಾಹಿತ್ಯವಿಲ್ಲ. ಯುವಪೀಳಿಗೆಗೆ ಇಂದು ಈ ಮಹಾನ್ ತ್ಯಾಗಿಗಳ ಮಾಹಿತಿ ಅತ್ಯವಶ್ಯಕವಾಗಿದೆ. ಅವರ ಜೀವನ ಮತ್ತು ಸಾಧನೆಯ ಬಗ್ಗೆ ಸಂಕ್ಷೇಪ ಮಾಹಿತಿಯನ್ನು "ಮಕ್ಕಳ ಕಸ್ತೂರ್‌ಬಾ" ಎಂಬ ಈ ಕಿರು ಪುಸ್ತಕದಲ್ಲಿ ನೀಡಿ ಶ್ರೀಮತಿ ಲೀಲಾ ವಾಸುದೇವ್ ಅವರು ಮಹದುಪಕಾರ ಮಾಡಿದ್ದಾರೆ.

ಪ್ರೊ. ಜಿ.ಬಿ. ಶಿವರಾಜು

ಅಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಕಾಲೇಜಿನಲ್ಲಿ ಮಕ್ಕಳೊಂದಿಗೆ ಬದುಕನ್ನು ಹಂಚಿಕೊಂಡ, ಲೀಲಾ ಅವರು ಮಕ್ಕಳಿಗಾಗಿಯೇ ಈ ಪುಸ್ತಕವನ್ನು ಬರೆಯಲು ಇಚ್ಛಿಸಿದ್ದೂ ಕೂಡ, ನಿರಂತರವಾಗಿ ಮಕ್ಕಳೊಂದಿಗಿರುವ ಆಸಕ್ತಿ ಹೊಂದಿರುವುದರ ದ್ಯೋತಕವಾಗಿದೆ. ಭವಿಷ್ಯದಲ್ಲಿ ಮಕ್ಕಳು ಪ್ರಜ್ಞಾವಂತರಾಗಿ ಬಾಳಲಿ ಎಂಬುದಕ್ಕಾಗಿ ದೇಶಕ್ಕಾಗಿ ದುಡಿದ ಗಣ್ಯರ ಜೀವನವಿಚಾರಗಳನ್ನು ಅವರಿಗೆ ತಿಳಿಸುವ ಪ್ರಯತ್ನ ಮಾಡಿದ ಪ್ರೊ. ಲೀಲಾ ಅವರ ಕಾಳಜಿಗೆ ಅಭಿನಂಧನೆಗಳು.

ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - 560001

ISBN NO : 978-81-950785-0-9